ವಿಜಯಪುರ | ಸಂಪುಟ 04 | ಸಂಚಿಕೆ 101 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಮಂಗಳವಾರ, ಜೂನ್, 09, 2026

"2018ರಲ್ಲಿ ಕಾಂಗ್ರೆಸ್ 80 ಸ್ಥಾನ ಗೆದ್ದರೂ ಮೈತ್ರಿ ಸರ್ಕಾರದಲ್ಲಿ ಕುಮಾರಸ್ವಾಮಿ ಅವರು ಸಿಎಂ ಆದರು. ಅವತ್ತು ನನ್ನನ್ನೂ ಮುಖ್ಯಮಂತ್ರಿ ಮಾಡಬಹುದಿತ್ತು. ಆದರೆ ಅವಕಾಶ ಸಿಗಲಿಲ್ಲ. 2026ರಲ್ಲೂ ಸಿಎಂ ಹುದ್ದೆ ನಿರೀಕ್ಷೆ ಇತ್ತು. ಆದ್ರೆ ರಾಜಕೀಯ ಕಾರಣಗಳಿಂದ ಸಾಧ್ಯವಾಗಲಿಲ್ಲ."



■ ಡಿಸಿಎಂ ಪರಮೇಶ್ವರ್
ಉಪ ಮುಖ್ಯಮಂತ್ರಿ

# ನಾಗರಬೆಟ್ಟ ಏತ ನೀರಾವರಿ ಪೂರ್ಣಗೊಳಿಸಲು ಆಗ್ರಹ

## ಆಲಮಟ್ಟಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ರೈತರ ಬೃಹತ್ ಪ್ರತಿಭಟನೆ | ಲಿಖಿತ ಭರವಸೆ ಬಳಿಕ ಹಿಂಪಡೆತ

■ ಉದಯರಶ್ಮಿ ದಿನಪತ್ರಿಕೆ

ಆಲಮಟ್ಟಿ: ಮುದ್ದೇಬಿಹಾಳ ತಾಲೂಕಿನ ನಾಗರಬೆಟ್ಟ ಏತ ನೀರಾವರಿ ಯೋಜನೆ ಪೂರ್ಣಗೊಳಿಸುವಿಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸೋಮವಾರ ಆಲಮಟ್ಟಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಆಲಮಟ್ಟಿಯ ರಾಮಲಿಂಗೇಶ್ವರ ವೃತ್ತದಲ್ಲಿ ನೂರಾರು ರೈತರು ವೃತ್ತಾಕಾರವಾಗಿ ನಿಂತು ಪ್ರತಿಭಟಿಸಿದರು.

ಈ ವೇಳೆ ಸಂಘದ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ, ಶಾಂತಗೌಡ ಪಾಟೀಲ ಸಂಗಮೇಶ ಸಗರ, ರಾಹುಲ ಕುಬಕಡ್ಡಿ, ಶಶಿಕಾಂತ ಗುರೂಜಿ, ಕಲ್ಲು ಸೊನ್ನದ ಮತ್ತಿತರರು ಮಾತನಾಡಿ, "2017ರಲ್ಲಿ ಆರಂಭಗೊಂಡ ನಾಗರಬೆಟ್ಟ ಏತ ನೀರಾವರಿ ಯೋಜನೆ 8 ವರ್ಷ ಕಳೆದರೂ ಪೂರ್ಣಗೊಂಡಿಲ್ಲ. 306 ಎಕರೆ ಭೂಮಿಗೆ ಪರಿಹಾರ ನೀಡದೇ ಕಾಮಗಾರಿ ನಡೆಸಲಾಗಿದೆ. ಭೂಸ್ವಾಧೀನ ಜಮೀನಿಗೆ ಇನ್ನೂ ಅವಾರ್ಡ್ ಆಗಿಲ್ಲ. ಮಾರುಕಟ್ಟೆ ಬೆಲೆಗಿಂತ ಕಡಿಮೆ ಪರಿಹಾರ ನೀಡಲಾಗಿದೆ" ಎಂದು ಆರೋಪಿಸಿದರು.

"ಕೆಲವೇ ಮೀಟರ್ ಕಾಮಗಾರಿ ಬಾಕಿ ಇದೆ. ಭೂಮಿ ವಶಪಡಿಸಿಕೊಂಡು ಕಾಮಗಾರಿ ಪೂರ್ಣಗೊಳಿಸುವ ಬಗ್ಗೆ ಲಿಖಿತ ಭರವಸೆ ನೀಡುವವರೆಗೂ ಪ್ರತಿಭಟನೆ ಹಿಂದಕ್ಕೆ ಪಡೆಯುವುದಿಲ್ಲ" ಎಂದು ಪಟ್ಟು ಹಿಡಿದರು.

**ಹೋರಾಟ ವಾಪಸ್:**

ಯುಕೆಪಿಯ ವಿಶೇಷ ಭೂಸ್ವಾಧೀನಾಧಿಕಾರಿ ಎಂ.ಬಿ. ನಾಗಠಾಣ, "ಒಪ್ಪಿತ ದರದ ಐ–ತೀರ್ಪು ರಚಿಸಲು ರೈತರು ಒಪ್ಪಿದರೆ ನಿಯಮನುಸಾರ ಮೂರು ತಿಂಗಳಲ್ಲಿ ಐ–ತೀರ್ಪು ಪ್ರಕಟಿಸಿ ಪರಿಹಾರ ನೀಡಲಾಗುವುದು" ಎಂದು ಲಿಖಿತ ಪತ್ರ ನೀಡಿದ ಬಳಿಕ ಸಂಜೆ ರೈತರು ಹೋರಾಟ ಹಿಂಪಡೆದರು. ಚಿಮ್ಮಲಗಿಯ ಸಿದ್ಧರೇಣುಕ ಸ್ವಾಮೀಜಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

ರೈತ ಮುಖಂಡರಾದ ಶಿವಾನಂದ ಟಕ್ಕಳಕಿ, ಶಶಿಕಾಂತ ದೇಸಾಯಿ, ಹನುಮಂತ ತಳವಾರ, ರವಿಶಂಕರ ಕೋತಿನ, ನಿಂಗರಾಜ ಆಲೂರ, ಸೀತಪ್ಪ ಗಣಿ ಮತ್ತಿತರರು ಉಪಸ್ಥಿತರಿದ್ದರು.


### ರೈತರ ಮುಖ್ಯ ಬೇಡಿಕೆಗಳು

1. ಯೋಜನಾ ನಿರಾಶ್ರಿತ ಪ್ರಮಾಣಪತ್ರ ನೀಡಬೇಕು.
2. ನಿರಾಶ್ರಿತ ರೈತರ ನಿರುದ್ಯೋಗಿ ಮಕ್ಕಳಿಗೆ ಜೀವನಾಧಾರ ಭತ್ಯೆ ಒದಗಿಸಬೇಕು.
3. ಕಲ್ಯಾಣ ಕರ್ನಾಟಕದ 371(ಜೆ) ಮಾದರಿಯಲ್ಲಿ ಸೌಲಭ್ಯ, ಮೀಸಲಾತಿ ನೀಡಬೇಕು.



### ಭಾರಿ ಬಂದೋಬಸ್ತ್

ಬಸವನಬಾಗೇವಾಡಿ ಡಿವೈಎಸ್‌ಪಿ ನೇತೃತ್ವದಲ್ಲಿ 150ಕ್ಕೂ ಅಧಿಕ ಪೊಲೀಸರು, ಇಬ್ಬರು ಸಿಪಿಐ, 10ಕ್ಕೂ ಹೆಚ್ಚು ಪಿಎಸ್‌ಐಗಳು ಬಂದೋಬಸ್ತ್ ಕೈಗೊಂಡಿದ್ದರು. ರಾಕ್ ಗಾರ್ಡನ್, ಕೃಷ್ಣಾ ಉದ್ಯಾನ, ಲವ–ಕುಶ ಉದ್ಯಾನ, ವಾಟರ್ ಪಾರ್ಕ್ ಸಂಪೂರ್ಣ ಬಂದ್ ಮಾಡಲಾಗಿತ್ತು.



### ಅಧಿಕಾರಿಗಳ ಸ್ಪಷ್ಟನೆ

ಸ್ಥಳಕ್ಕೆ ಭೇಟಿ ನೀಡಿದ ಮುಖ್ಯ ಎಂಜಿನಿಯರ್ ಡಿ. ಬಸವರಾಜ, ಕೆಬಿಜೆಎನ್‌ಎಲ್‌ನ ತಾಂತ್ರಿಕ ನಿರ್ದೇಶಕ ವಿ.ಎಸ್. ಹಿರೇಗೌಡರ, "ಯೋಜನೆಯ ಮುಖ್ಯ ಕಾಲುವೆಯ ಸುಮಾರು 1 ಕಿ.ಮೀ ಕಾಮಗಾರಿ ಮಾತ್ರ ಬಾಕಿ ಇದೆ. ರೈತರು ಸಹಕರಿಸಿದರೆ ನಾಳೆಯೇ ಕಾಮಗಾರಿ ಆರಂಭಿಸುತ್ತೇವೆ. ಭೂಸ್ವಾಧೀನಕ್ಕಾಗಿ ಕೆಬಿಜೆಎನ್‌ಎಲ್ 223 ಕೋಟಿ ರೂ. ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ಡಿಪಾಸಿಟ್ ಮಾಡಿದೆ" ಎಂದರು.

ಯುಕೆಪಿ ಪುನರ್ವಸತಿ ವಿಶೇಷ ಜಿಲ್ಲಾಧಿಕಾರಿ ಮಾರುತಿ ಬ್ಯಾಕೋಡ, "ರೈತರು ಒಪ್ಪಂದದ ಬೆಲೆಗೆ ಪರಿಹಾರ ಪಡೆಯಲು ಒಪ್ಪಿದರೆ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಿ ಮೂರು ತಿಂಗಳೊಳಗೆ ಪರಿಹಾರ ನೀಡಲಾಗುವುದು" ಎಂದರು.

# ನಿಗದಿತ ಬೆಲೆಗೆ ರಸಗೊಬ್ಬರ-ಬೀಜ ಮಾರಾಟಕ್ಕೆ ಆಗ್ರಹಿಸಿ ರೈತರ ಮನವಿ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಪಟ್ಟಣದ ರೈತ ಸಂಪರ್ಕ ಕೇಂದ್ರ ಹಾಗೂ ವಿವಿಧ ಕೃಷಿ ಪರಿಕರ ಮಾರಾಟ ಮಳಿಗೆಗಳಲ್ಲಿ ರಸಗೊಬ್ಬರ ಹಾಗೂ ಬೀಜಗಳನ್ನು ನಿಗದಿತ ಬೆಲೆಗೆ ಮಾರಾಟ ಮಾಡಬೇಕು ಹಾಗೂ ಕೊರತೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ರೈತರು ಸಹಾಯಕ ಕೃಷಿ ಅಧಿಕಾರಿ ಶರಣಗೌಡ ಬಿರಾದಾರರಿಗೆ ಮನವಿ ಸಲ್ಲಿಸಿದರು. ಪಟ್ಟಣದ ರೈತ ಸಂಪರ್ಕ ಕೇಂದ್ರಕ್ಕೆ ಸೋಮವಾರ ಆಗಮಿಸಿದ ರೈತರು ಮುಂಗಾರು ಬಿತ್ತನೆಗೆ ಅಗತ್ಯವಾದ ಬೀಜ, ರಸಗೊಬ್ಬರಗಳ ಕುರಿತು ಮನವಿ ಮಾಡಿದರು.

ಈ ಸಂದರ್ಭದಲ್ಲಿ ರೈತಸಂಘ ಹಾಗೂ ಹಸಿರುಸೇನೆ ಜಿಲ್ಲಾ ಉಪಾಧ್ಯಕ್ಷ ಸಂಪತ್ ಜಮಾದಾರ ಮಾತನಾಡಿ, ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಹಾಗೂ ಕೃಷಿ ಮಳಿಗೆಗಳ ಮಾರಾಟಗಾರರು ರೈತರಿಗೆ ಉತ್ತಮ ಸಲಹೆಯೊಂದಿಗೆ ಗುಣಮಟ್ಟದ ಕೃಷಿ ಪರಿಕರಗಳನ್ನು ಒದಗಿಸಬೇಕು ಹಾಗೂ ಕಡ್ಡಾಯವಾಗಿ ರಶೀದಿ ನೀಡಬೇಕು. ಈ ಸಂದರ್ಭದಲ್ಲಿ ಕೃತಕ ಅಭಾವ ಸೃಷ್ಟಿಸುವುದು, ದರಗಳಲ್ಲಿ ವ್ಯತ್ಯಾಸ ಮಾಡುವಂತ ಚಟುವಟಿಕೆಗಳು ಹಾಗೂ ಮುಖ್ಯವಾಗಿ ದೂರುಗಳು ಕಂಡು ಬಂದಲ್ಲಿ ಮಾರಾಟಗಾರರ ವಿರುದ್ಧ ದೂರು ನೀಡಲಾಗುವುದು ಎಂದು ಎಚ್ಚರಿಸಿ ಸಹಾಯಕ ಕೃಷಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕೃಷಿಕ ಸಮಾಜದ ತಾಲ್ಲೂಕು ಘಟಕದ ಅಧ್ಯಕ್ಷ ಸಿದ್ದು ಆನಂದಿ, ಉಪಾಧ್ಯಕ್ಷ ಎಂ.ಡಿ.ಕಣಮೇಶ್ವರ, ನಿರ್ದೇಶಕರಾದ ವಿಠ್ಠಲ ಕನ್ನೊಳ್ಳಿ, ಸಾಹೇಬಗೌಡ ಉತ್ನಾಳ, ಮಹಾದೇವಪ್ಪ ಹರವಾಳ ಚಂದ್ರಕಾಂತ ಪ್ಯಾಟಿ, ಅಜೀಜ್ ಯಲಗಾರ, ರಾಚೋಟಯ್ಯ ಹಿರೇಮಠ, ರಾಮು ದೇಸಾಯಿ, ಈರಣ್ಣ ಒಂಟೆತ್ತೀನ, ಕರಭಂಟನಾಳ(ಪಡಗಾನೂರ) ಇದ್ದರು.

# ನಿಗದಿತ ದರದಲ್ಲಿ ರಸಗೊಬ್ಬರ ಪೂರೈಸಲು ರೈತರಿಂದ ಮನವಿ



■ ಉದಯರಶ್ಮಿ ದಿನಪತ್ರಿಕೆ

ಚಡಚಣ: ರೈತರಿಗೆ ಸರ್ಕಾರ ನಿಗದಿಪಡಿಸಿದ ದರದಲ್ಲಿ ರಸಗೊಬ್ಬರ ಪೂರೈಸುವಂತೆ ಹಾಗೂ ಹೆಚ್ಚಿನ ದರಕ್ಕೆ ಮಾರಾಟ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಚಡಚಣ ತಾಲೂಕಿನ ಹಾಗೂ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಮುಖಂಡರು ಚಡಚಣ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

ಚಡಚಣ ತಾಲೂಕು ದಂಡಾಧಿಕಾರಿಗಳು ಹಾಗೂ ತಹಸೀಲ್ದಾರ ಸಂಜೆಯ ಇಂಗಳೆ ಅವರಿಗೆ ಸಲ್ಲಿಸಿದ ಮನವಿಯಲ್ಲಿ, ಪ್ರಸ್ತುತ ಮಳೆಗಾಲ ಆರಂಭವಾಗಿರುವ ಹಿನ್ನೆಲೆಯಲ್ಲಿ ರೈತರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಯೂರಿಯಾ, ಡಿಎಪಿ ಸೇರಿದಂತೆ ವಿವಿಧ ರಸಗೊಬ್ಬರಗಳಿಗೆ ಹೆಚ್ಚಿನ ಬೇಡಿಕೆ ಇದ್ದು, ಕೆಲ ಖಾಸಗಿ ಮಾರಾಟಗಾರರು ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ ಮಾಡುತ್ತಿದ್ದಾರೆ ಎಂದು ಆರೋಪಿಸಲಾಗಿದೆ.

ಇದರಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದು, ಕೃಷಿ ವೆಚ್ಚ ಹೆಚ್ಚಾಗುತ್ತಿದೆ. ರೈತರಿಗೆ ಅಗತ್ಯವಿರುವ ರಸಗೊಬ್ಬರಗಳು ಸಹಕಾರ ಸಂಘಗಳು ಹಾಗೂ ಅಧಿಕೃತ ಮಾರಾಟ ಕೇಂದ್ರಗಳಲ್ಲಿ ಸಮರ್ಪಕ ಪ್ರಮಾಣದಲ್ಲಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು. ಅಲ್ಲದೇ, ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ ಮಾಡುವ ವ್ಯಾಪಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಿ, ಅಗತ್ಯವಿದ್ದರೆ ಅವರ ಪರವಾನಗಿಯನ್ನು ರದ್ದುಪಡಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಕೆಆರ್‌ಎಸ್ ಪಕ್ಷದ ತಾಲೂಕು ಅಧ್ಯಕ್ಷ ನಾಗೇಶ ಸರಸಂಬಿ ಮಾತನಾಡಿ, "ರೈತರು ದೇಶದ ಬೆನ್ನೆಲುಬು. ಬಿತ್ತನೆ ಸಮಯದಲ್ಲಿ ರಸಗೊಬ್ಬರ ಕೊರತೆ ಹಾಗೂ ಹೆಚ್ಚುವರಿ ದರ ವಸೂಲಿಯಿಂದ ರೈತರು ತೊಂದರೆ ಅನುಭವಿಸುತ್ತಿದ್ದಾರೆ. ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ರೈತರಿಗೆ ನ್ಯಾಯ ಒದಗಿಸಬೇಕು" ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕೆಆರ್‌ಎಸ್ ಪಕ್ಷದ ಚಡಚಣ ತಾಲೂಕು ಅಧ್ಯಕ್ಷ ನಾಗೇಶ ಸರಸಂಬಿ, ತಾಲೂಕು ಉಪಾಧ್ಯಕ್ಷ ರಮಜಾನ್ ಕೊಂಕಣಿ, ತಾಲೂಕು ಪ್ರಧಾನ ಕಾರ್ಯದರ್ಶಿ ಅಮಸಿದ್ದ ತೊಳೆ, ನಗರ ಘಟಕ ಅಧ್ಯಕ್ಷ ಅಣ್ಣ ಪೂಜಾರಿ, ರಾಯಗೊಂಡ ಕೋಳಿ, ಸುನೀಲ ತೊಳೆ, ನಿಂಗಪ್ಪ ಶಿವಶರಣ, ಗೌರೇಶ ಖಡ್ಡೆ, ಮಲ್ಲಿಕಾರ್ಜುನ ಕಾಂಬಳೆ ಸೇರಿದಂತೆ ಪಕ್ಷದ ಕಾರ್ಯಕರ್ತರು ಹಾಗೂ ರೈತರು ಉಪಸ್ಥಿತರಿದ್ದರು.

# ವಕೀಲ ಖಾದ್ರಿ ವಿರುದ್ಧ ಕ್ರಮಕ್ಕೆ ಶಾಸಕ ಯತ್ನಾಳ ಬೆಂಬಲಿಗರಿಂದ ಮನವಿ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಯತ್ನಿಸುತ್ತಿರುವ ವಕೀಲ ಸೈಯದ್ ಆಸೀಫ್ ಉಲ್ಲಾ ಸೈಯದ್ ಖಾದರ್ ಭಾಷಾ ಖಾದ್ರಿ ಮೇಲೆ ಕೇಸ್ ದಾಖಲಿಸಿ, ಬಂಧಿಸಿ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳುವಂತೆ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳರ ಬೆಂಬಲಿಗರು ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ಔದ್ರಾಮ್ ಅವರಿಗೆ ಸೋಮವಾರ ಮನವಿ ಪತ್ರ ಸಲ್ಲಿಸಿದರು.

ವಿಜಯಪುರದ ವಕೀಲ ಸೈಯದ್ ಆಸೀಫ್ ಉಲ್ಲಾ ಸೈಯದ್ ಖಾದರ್ ಭಾಷಾ ಖಾದ್ರಿ ಎಂಬಾತ ಜನಪ್ರತಿನಿಧಿಯಾದ ಬಸನಗೌಡ ಪಾಟೀಲ ಯತ್ನಾಳರ ಬಗ್ಗೆ ಪದೇ ಪದೇ ಅತ್ಯಂತ ಕೀಳು ಮಟ್ಟದ ಅವಾಚ್ಯ ಶಬ್ದಗಳನ್ನು ಬಳಸಿ ಏಕವಚನದಲ್ಲಿ ಅವಹೇಳನಕಾರಿ ಮಾತನಾಡಿದ್ದು, ಎಲ್ಲ ಕಡೆ ವೈರಲ್ ಆಗಿದೆ. ಇದರಿಂದ ರಾಜ್ಯಮಟ್ಟದಲ್ಲಿ ಬಸನಗೌಡ ಪಾಟೀಲ ಯತ್ನಾಳರ ಹೆಸರಿಗೆ ಕಳಂಕವನ್ನು ಸತತವಾಗಿ ತರುತ್ತಿದ್ದಾನೆ. ಇವನ ಹೀನ ನಡೆಯಿಂದ ರಾಜ್ಯಾದ್ಯಂತ ಇರುವ ಬಸನಗೌಡರ ಲಕ್ಷಾಂತರ ಹಿಂದೂ ಅಭಿಮಾನಿಗಳು, ಕಾರ್ಯಕರ್ತರು, ಹಿತೈಷಿಗಳು ಅಲ್ಲದೆ, ಸಮಾಜ ಬಾಂಧವರು ರೊಚ್ಚಿಗೆದ್ದು ಇವನ ವಿರುದ್ಧ ಕ್ರಮ ಜರುಗಿಸಬೇಕು. ಇಲ್ಲದಿದ್ದರೆ, ವಿಜಯಪುರ ನಗರಕ್ಕೆ ಎಲ್ಲ ಕಡೆಯಿಂದ ಆಗಮಿಸಿ ದೊಡ್ಡ ಹೋರಾಟ ಮಾಡುತ್ತೇವೆ ಎಂದು ಕೇಳುತ್ತಿದ್ದಾರೆ.

ಶಾಂತವಾದ ವಿಜಯಪುರ ನಗರದಲ್ಲಿ ಯಾವುದೇ ಅಹಿತಕರ ಅನಾಹುತ ಘಟನೆಗಳು ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಅವನನ್ನು ಬಂಧಿಸಿ, ಕೇಸ್ ದಾಖಲಿಸಿಕೊಂಡು, ಜಿಲ್ಲೆಯಿಂದ ಗಡಿಪಾರು ಮಾಡಬೇಕು. ಅಲ್ಲದೆ, ಇಂತಹ ಕ್ರಿಮಿನಲ್ ವ್ಯಕ್ತಿಯಿಂದ ಸಾರ್ವಜನಿಕರಿಗೆ ಯಾವುದೇ ನ್ಯಾಯ ಸಿಗಲು ಸಾಧ್ಯವಿಲ್ಲ. ಹೀಗಾಗಿ ಸರ್ಕಾರಿ ವಕೀಲ ಹುದ್ದೆಯಿಂದಲೂ ತಕ್ಷಣ ವಜಾ ಮಾಡಬೇಕು.

ಈಗಾಗಲೇ ಇತನ ವಿರುದ್ಧದ ದಲಿತ ಮಹಿಳೆ ಮೇಲೆ ಹಲ್ಲೆ ಹಾಗೂ ಕಿರುಕುಳ ನೀಡಿದ ಪ್ರಕರಣ, ಕೋರ್ಟ ಆವರಣದಲ್ಲಿಯೇ ಪೊಲೀಸ್ ಅಧಿಕಾರಿ ಮೇಲೆ ಹಲ್ಲೆ ನಡೆಸಿದ ಪ್ರಕರಣ, ಮಹಾನಗರ ಪಾಲಿಕೆ ಸದಸ್ಯೆಯ ಪತಿಯ ಹತ್ಯೆ ಪ್ರಕರಣ, ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಮಹಾನಗರ ಪಾಲಿಕೆ ಆಯುಕ್ತರ ಬಗ್ಗೆ ಕೆಟ್ಟ ಪದ ಬಳಸಿ ನಿಂಧಿಸಿದ ಪ್ರಕರಣ ಸೇರಿದಂತೆ ಹಲವಾರು ಪ್ರಕರಣಗಳಲ್ಲಿ ಭಾಗಿಯಾಗಿ ರೌಡಿಶೀಟರ್ ನಿಂದಾಗಿ ಗಡಿಪಾರು ಶಿಕ್ಷೆಗೆ ಒಳಗಾಗಿರುವ ವ್ಯಕ್ತಿ ಆಗಿದ್ದಾನೆ. ಕ್ರಿಮಿನಲ್ ಹಿನ್ನೆಲೆ ಹೊಂದಿರುವ ವ್ಯಕ್ತಿಯ ಕೆಲಸವೇ ಸಮಾಜದಲ್ಲಿ ಗಲಭೆ ಸೃಷ್ಟಿಸಿ ಅಶಾಂತಿ ನಿರ್ಮಾಣ ಮಾಡುವ ದುರುದ್ದೇಶ ಹೊಂದಿದ್ದಾನೆ. ಅದಕ್ಕೆ ಅವಕಾಶ ಕಲ್ಪಿಸಬಾರದು.


ಸಮಾಜದಲ್ಲಿ ಕೋಮುಗಲಭೆ ಸೃಷ್ಟಿಸಲು ಯತ್ನಿಸುತ್ತಿರುವ ಹಾಗೂ ಜನಪ್ರತಿನಿಧಿಗಳು, ಅಧಿಕಾರಿಗಳ ಬಗ್ಗೆ ಕೀಳು ಮಟ್ಟದ ಅವಾಚ್ಯ ಶಬ್ದಗಳನ್ನು ಬಳಸಿ, ಏಕವಚನದಲ್ಲಿ ಸಂಭೋಧಿಸುವ ಮೂಲಕ ಸಾಂವಿಧಾನಿಕ ಹುದ್ದೆಯಲ್ಲಿರುವವರಿಗೆ ಅವಮಾನ ಮಾಡುತ್ತಿರುವ ವಕೀಲ ಸೈಯದ್ ಆಸೀಫ್ ಉಲ್ಲಾ ಸೈದ್ ಖಾದರ್ ಭಾಷಾ ಖಾದ್ರಿ ಮೇಲೆ ಶೀಘ್ರ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮುಖಂಡರಾದ ವಿಕ್ರಮ ಗಾಯಕವಾಡ, ಬಾಬು ಶಿರಶ್ಯಾಡ, ಸುನೀಲ ಬೈರವಾಡಗಿ, ಅಶೋಕ ಬೆಲ್ಲದ, ಕಿರಣ ಕಾಳೆ, ಲಕ್ಷ್ಮಣ ಜಾಧವ, ಯುವರಾಜ ಚೋಳಕೆ, ರಮೇಶ ಪಡಸಲಗಿ, ಸಂಜು ಭೋಸಲೆ, ಶಿವಾನಂದ ಸಿಂದಗಿ, ಸುರೇಶ ಚವ್ಹಾಣ, ಗುಂಡೇಶ್ವರ ಹಳಕಟ್ಟಿ, ಪ್ರದೀಪ ಕಲ್ಯಾಣಶೆಟ್ಟಿ, ಪ್ರಸಾದ ಶಿವಸಿಂಪಿ, ಅನೀಲ ಭೂಸನೂತ ಇದ್ದರು.

# ವೃತ್ತಿಧರ್ಮದ ಜೊತೆಗೆ ಸಮಾಜಮುಖಿ ಚಿಂತನೆ ಇರಲಿ

## ಸಾರಿಗೆ ಇಲಾಖೆ ಕೆಕೆಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ದೇವಾನಂದ ಬಿರಾದಾರ ಅಭಿಮತ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ವೃತ್ತಿಧರ್ಮದ ಜೊತೆಗೆ ಸಮಾಜಮುಖಿ ಚಿಂತನೆ ಮೂಲಕ ಕಾರ್ಯ ನಿರ್ವಹಿಸಿದರೆ ಆತ್ಮತೃಪ್ತಿ ಇರುತ್ತದೆ. ಈ ನಿಟ್ಟಿನಲ್ಲಿ ಹುಟ್ಟೂರಿನ ಋಣ ತೀರಿಸುವ ಕಾರ್ಯ ಮಾಡೋಣ ಎಂದು ಸಾರಿಗೆ ಇಲಾಖೆ ಕೆಕೆಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ದೇವಾನಂದ ಬಿರಾದಾರ ಹೇಳಿದರು.

ವಿಜಯಪುರದಲ್ಲಿ ಚಿಕ್ಕರೂಗಿ ನೌಕರರ ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಂಡ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಾವೆಲ್ಲ ಗ್ರಾಮೀಣ ಪ್ರದೇಶದಿಂದ ಬಂದಿದ್ದೇವೆ. ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸುಧಾರಣೆಗೆ ನೌಕರರೆಲ್ಲ ಸೇರಿಕೊಂಡು ಸಹಕಾರ ನೀಡುವ ಕಾರ್ಯ ಮಾಡೋಣ, ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲ ಮಾಡಿಕೊಡೋಣ ಎಲ್ಲರೂ ಸಹಕಾರ ನೀಡಬೇಕೆಂದರು.

ಅಮ್ಮ ಫೌಂಡೇಶನ್ ಗೌರವಾಧ್ಯಕ್ಷ ಯು ಐ ಶೇಖ ಮಾತನಾಡಿ, ಆಧುನಿಕತೆ ಹೆಚ್ಚಾದಂತೆ ಬದುಕಿನಲ್ಲಿ ಒತ್ತಡಗಳು ಹೆಚ್ಚಾಗುತ್ತಿದೆ. ಯಾರಿಗೂ ಸಮಯವಿಲ್ಲದಂತಾಗಿದೆ. ಇಂತಹದರಲ್ಲಿ ಚಿಕ್ಕರೂಗಿ ನೌಕರರೆಲ್ಲರೂ ಒಂದೆಡೆ ಸೇರಿಕೊಂಡು ಇಂತಹ ಕಾರ್ಯಕ್ರಮ ಆಯೋಜನೆ ಮಾಡಿರುವುದು ಶ್ಲಾಘನೀಯ ಕಾರ್ಯವಾಗಿದೆ. ಇವರು ಎಲ್ಲರಿಗೂ ಮಾದರಿಯಾಗಿದ್ದು, ಮುಂಬರುವ ದಿನಗಳಲ್ಲಿ ನೌಕರರೆಲ್ಲ ಸೇರಿ ಸಮಾಜಮುಖಿ ಚಟುವಟಿಕೆಗಳನ್ನು ಮಾಡಿ ತಮ್ಮ ಸೇವಾ ಋಣವನ್ನು ತೀರಿಸುವ ಕಾರ್ಯವಾಗಲಿ ಎಂದು ಶುಭ ಕೋರಿದರು.

ರೇಷ್ಮೆ ಇಲಾಖೆಯ ತಾಲೂಕು ಅಧಿಕಾರಿ ಬಾಬುಗೌಡ ಬಿರಾದಾರ, ಇಂಜಿನಿಯರ್ ಎಸ್ ಎಂ ಕಲಬುರಗಿ, ಪ್ರಾಧ್ಯಾಪಕ ಡಾ. ಬಿ ಎಂ ಕೋರಬು, ಶಿಕ್ಷಕರಾದ ಎಮ್ ಎಲ್ ಖೋಜಗೀರ, ಐ ಆರ್ ಸಾರವಾಡ, ಎಸ್ ಎಸ್ ಇನಾಮದಾರ, ಪೊಲೀಸ್ ಇಲಾಖೆಯ ಅಜೀತ ಬಿರಾದಾರ ಮಾತನಾಡಿದರು.

ಸಮಾರಂಭದಲ್ಲಿ ಚಿಕ್ಕರೂಗಿ ನೌಕರರ ಗೆಳೆಯರ ಬಳಗದ ವತಿಯಿಂದ ವಿಭಾಗೀಯ ನಿಯಂತ್ರಣಾಧಿಕಾರಿಯಾಗಿ ಜಿಲ್ಲೆಗೆ ಆಗಮಿಸಿದ ದೇವಾನಂದ ಬಿರಾದಾರ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕಬೂಲ್ ಕೊಕಟನೂರ ಹಾಗೂ ಮಹಾನಗರ ಪಾಲಿಕೆಗೆ ವರ್ಗಾವಣೆಯಾಗಿ ಬಂದ ಎಸ್ ಎಮ್ ಕಲಬುರಗಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ನ್ಯಾಯವಾದಿ ಎಂ ಕೆ ನದಾಫ, ನಾಗಠಾಣ ಕೆಪಿಎಸ್ ಕಾಲೇಜಿನ ಪ್ರಾಚಾರ್ಯ ಹುಸೇನ್ ಹಳ್ಳಿ, ನಿವೃತ್ತ ಅಧಿಕಾರಿ ಸೊಮಣ್ಣ ಮದಭಾವಿ, ಸಾರಿಗೆ ಇಲಾಖೆ ಅಧಿಕಾರಿ ಬನಸೋಡೆ, ಬಿ ವ್ಹಿ ಚಂಡಕಿ, ಅಲ್ತಾಫ ಸಾಲೋಟಗಿ, ಡಿ ಎಂ ನದಾಫ, ಸಿದ್ದನಗೌಡ ಪಾಟೀಲ ಸೇರಿದಂತೆ ಚಿಕ್ಕರೂಗಿ ನೌಕರರ ಗೆಳೆಯರ ಬಳಗ ಉಪಸ್ಥಿತರಿದ್ದರು.

## ಇಂಡಿಯಲ್ಲಿ 29 ಮೀ.ಮೀ ಮಳೆ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ತಾಲೂಕಿನಲ್ಲಿ ಶುಕ್ರವಾರ ರಾತ್ರಿ 8 ಗಂಟೆಗೆ 29 ಮೀ ಮಿ ಮಳೆಯಾಗಿದೆ. ಕೋಳುರಗಿಯಲ್ಲಿ 53 ಮೀ ಮೀ, ನಾದ ಕೆಡಿ 50.5, ಲಾಳಸಂಗಿ 41.5, ಹಡಲಸಂಗ 25, ಬಸನಾಳ 17.5, ನಂದರಗಿ 16.5, ಇಂಡಿ 16.2, ಬಬಲಾದ 11 ಮೀ ಮೀ ಮಳೆಯಾಗಿದೆ.

ಕಳೆದ ಮಂಗಳವಾರ ಕೂಡ 17 ಮೀ ಮೀ ಮಳೆಯಾಗಿದ್ದು , ಇಂದು ಶನಿವಾರ ಸಂಜೆ 4 ಗಂಟೆಗೆ 10 ಮೀ ಮೀ ಅಧಿಕ ಮಳೆಯಾಗಿದೆ ಬಿತ್ತನೆಗೆ ಪೂರಕ ವಾತಾವರಣವಿದೆ ಎಂದು ಕೃಷಿ ಸಹಾಯಕ ನಿರ್ದೇಶಕ ಮಹಾದೇವಪ್ಪ ಏವೂರ ತಿಳಿಸಿದ್ದಾರೆ.

## ಅಮೂಲ್ಯ ಕೃತಿಗಳ ಮರು ಮುದ್ರಣ: ಸಾಹಿತ್ಯಾಸಕ್ತರಿಂದ ಅಭಿಪ್ರಾಯಕ್ಕೆ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಹಿಂದೆ ಮುದ್ರಿತವಾಗಿ, ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಿಲ್ಲದ ಕೆಲವು ಪ್ರಮುಖ ಹಾಗೂ ಅಮೂಲ್ಯ ಕೃತಿಗಳನ್ನು ಮರು ಮುದ್ರಣ ಮಾಡಲು ಯೋಜನೆ ರೂಪಿಸಿದೆ. ಈ ಸಂಬಂಧ ಸಾಹಿತ್ಯಾಸಕ್ತರು ಮತ್ತು ಸಾರ್ವಜನಿಕ–ರಿಂದ ಸಲಹೆ ಹಾಗೂ ಅಭಿಪ್ರಾಯಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಇಲಾಖೆಯ ವೆಬ್‌ಸೈಟ್ kannadasiri.karnataka.gov.in ಗೆ ಭೇಟಿ ನೀಡಿ ತಮ್ಮ ಅನಿಸಿಕೆ ಹಾಗೂ ಕೃತಿಗಳ ಕುರಿತಾದ ಮಾಹಿತಿಯನ್ನು ಹಂಚಿಕೊಳ್ಳಲು ಮುಕ್ತ ಅವಕಾಶ ಕಲ್ಪಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ ಭೋವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಿಎಂ ಮತ್ಸ್ಯ ಸಂಪದ ಯೋಜನೆಯಡಿ ಇನ್ಸುಲೇಟೆಡ್ ವಾಹನ ಖರೀದಿಗೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ:ಪ್ರಧಾನಮಂತ್ರಿಮತ್ಸ್ಯಸಂಪದಯೋಜನೆಯಡಿಯಲ್ಲಿ, 2020–21 ರಿಂದ 2023–24ನೇ ಸಾಲಿನ ಜಿಲ್ಲೆಗೆ ಸಾಮಾನ್ಯ ವರ್ಗದಡಿ ಒಂದು ಇನ್ಸುಲೇಟೆಡ್ ವಾಹನ ಖರೀದಿಗೆ ಸಹಾಯಧನಕ್ಕಾಗಿ ಜಿಲ್ಲೆಯ ಅರ್ಹ ಆಸಕ್ತ ಮೀನುಗಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಶೇ. 40 ರಷ್ಟು ಸಹಾಯಧನ ದೊರೆಯಲಿದ್ದು, ಉಳಿದ ಶೇ. 60 ರಷ್ಟು ಮೊತ್ತವನ್ನು ಫಲಾನುಭವಿಗಳೇ ಭರಿಸಬೇಕಾಗುತ್ತದೆ. ಅರ್ಹತೆಗಳೇನು ಅರ್ಜಿದಾರರು ಕಡ್ಡಾಯವಾಗಿ ವಿಜಯಪುರ ಜಿಲ್ಲೆಯ ಖಾಯಂ ನಿವಾಸಿಯಾಗಿರಬೇಕು. ಮೀನುಗಾ–ರಿಕೆ ಅಥವಾ ಮೀನು ಮಾರಾಟ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಆಸಕ್ತರು ಮೀನುಗಾರರ ಸಹಕಾರ ಸಂಘಗಳ ಸದಸ್ಯರಾಗಿರುವುದು ಕಡ್ಡಾಯವಾಗಿದೆ. ಅರ್ಜಿದಾರರು ಚಾಲನಾ ಪರವಾನಗಿ ಹೊಂದಿರಬೇಕು.

ಅರ್ಜಿ ಸಲ್ಲಿಸುವ ವಿಧಾನ ಮತ್ತು ದಾಖಲೆಗಳು ಆಸಕ್ತ ಫಲಾನುಭವಿಗಳು ನಿಗದಿತ ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರು ವಿಜಯಪುರ–ಮುದ್ದೇಬಿಹಾಳ ಅಥವಾ ಮೀನುಗಾರಿಕೆ ಉಪ ನಿರ್ದೇಶಕರು, ವಿಜಯಪುರ ಕಚೇರಿಯನ್ನು ಸಂಪರ್ಕಿಸಬಹುದು. ಭರ್ತಿ ಮಾಡಿದ ಅರ್ಜಿಗಳೊಂದಿಗೆ ಅಗತ್ಯ ದಾಖಲೆಗಳಾದ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಪ್ರತಿ, ಚಾಲನಾ ಪರವಾನಗಿ, ಮೀನುಗಾರರ ಸಹಕಾರ ಸಂಘದ ಗುರುತಿನ ಚೀಟಿ–ಮೀನುಗಾರಿಕೆ ಪರವಾನಗಿ ಹಾಗೂ ಫೋಟೋಗಳೊಂದಿಗೆ ದಿನಾಂಕ: 15–06–2026 ರೊಳಗಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರು ವಿಜಯಪುರ ಮೊ: 9480822974 ಅಥವಾ ಮುದ್ದೇಬಿಹಾಳ ಮೊ: 9880210505 ಕಚೇ–ರಿಗೆ ಸಲ್ಲಿಸಬಹುದಾಗಿದೆ ಎಂದು ಮೀನುಗಾರಿಕೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## ಬಿಜೆಪಿಯಿಂದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಭಾರತೀಯ ಜನತಾ ಪಾರ್ಟಿ ವಿಜಯಪುರ ನಗರ ಯುವ ಮೋರ್ಚಾ ಆಯೋಜಿಸಿದ ಸಸಿ ನೆಡುವ ಕಾರ್ಯಕ್ರಮ ವಿಜಯಪುರ ನಗರ ಕರಾಡದೊಡ್ಡಿ ಹತ್ತಿರ ಇರುವ ಹನುಮಗಿರಿ ದೇವಸ್ಥಾನದಲ್ಲಿ ನಡೆಯಿತು.

ಈ ವಿಶ್ವ ಪರಿಸರ ದಿನಾಚರಣೆಯಲ್ಲಿ ಭಾಗವಹಿಸಿದ ಮಾಜಿ ಕೇಂದ್ರ ಸಚಿವ, ಸಂಸದ ರಮೇಶ ಜಿಗಜಿಣಗಿ, ಮಾಜಿ ಸಚಿವರಾದ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಮಹಾನಗರ ಪಾಲಿಕೆಯ ಸದಸ್ಯರಾದ ರಾಜು ಮಗೀಮಠ, ಜಿಲ್ಲೆಯ ಪ್ರಧಾನ ಕಾರ್ಯದರ್ಶಿಗಳಾದ ಈರಣ್ಣ ರಾವೂರ, ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಕೃಷ್ಣಾ ಗುನ್ನಾಳಕರ, ಜಿಲ್ಲೆಯ ಕಾರ್ಯದರ್ಶಿಗಳಾದ ರಮೇಶ ಬಿದನೂರ, ಚಿನ್ನು ಚಿನಗುಂಡಿ, ಎಸ್.ಸಿ. ಮೋರ್ಚಾದ ಅಧ್ಯಕ್ಷರಾದ ಮಂಜುನಾಥ ಮೀಸಿ, ವಿಜಯ ಜೋಶಿ, ರಾಮಚಂದ್ರ ಚೌಹಾಣ, ಯುವ ಮೋರ್ಚಾ ಅಧ್ಯಕ್ಷರಾದ ಆನಂದ ಮುಚ್ಚಂಡಿ, ವಿವೇಕ ತಾವರಗೇರಿ, ಮಂಥನ ಗಾಯಕವಾಡ, ಮಹಿಳಾ ಮೋರ್ಚಾ ಅಧ್ಯಕ್ಷೆ ಶ್ರೀಮತಿ ಭಾರತಿ ಭೂಯಾರ, ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಜಯಶ್ರೀ ಅಫಜಲ್ಲಪೂರ ಹಾಗೂ ಕಾರ್ಯಕಾ–ರಿಣಿ ಕಲ್ಪನಾ ಶಾಬಾದಿ, ಸೇರಿದಂತೆ ಪಕ್ಷದ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

## ಜೀವ ಸಂಕುಲ ಉಳಿವಿಗೆ ಪರಿಸರ ರಕ್ಷಿಸಿ

ಜೇವರಗಿ: ಅರಣ್ಯ ನಾಶ, ಗಣಿಗಾರಿಕೆ,ಕೈಗಾರಿಕೆಯಿಂದಾಗಿ ವಾತಾವರಣ ಹಾನಿಗೀಡಾಗುತ್ತಿದೆ. ಇದರಿಂದ ಪರಿಸರಕ್ಕೆ ಮಾತ್ರವಲ್ಲದೇ ಆರೋಗ್ಯದ ಮೇಲೂ ಪರಿಣಾಮ ಬೀರಲಿದೆ. ಕಾರಣ ಪ್ರತಿಯೊಬ್ಬರೂ ಪರಿಸರ ಉಳಿಸಿ, ಬೆಳೆಸಿ ಸಮಾಜಕ್ಕೆ ಮಹತ್ತರ ಕೊಡುಗೆ ನೀಡಬೇಕು' ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಕಾಶೀನಾಥ್ ಉಪ್ಪಾರ ಹೇಳಿದರು. ತಾಲ್ಲೂಕು ಕಾನೂನು ಸೇವೆಗಳ ಸಮಿತಿ ,ವಕೀಲರ ಸಂಘ, ಅರಣ್ಯ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಆಶ್ರಯದಲ್ಲಿ ಪಟ್ಟಣದ ಸರ್ಕಾರಿ ಕನ್ಯಾ ಪ್ರೌಢ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

# ಪರಿಸರ ವೃದ್ಧಿ ಹಾಗೂ ಸಂರಕ್ಷಣೆಗೆ ಶ್ರಮಿಸಬೇಕು : ಜೋಗೂರ

■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ಪಟ್ಟಣದ ವಿಶ್ವೇಶ್ವರ ಬಾಲಭಾರತಿ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಮಕ್ಕಳಿಂದ ಸಸಿಗೆ ನಿರೂಣಿಸುವ ಮೂಲಕ ಆಚರಿಸಲಾಯಿತು.

ಈ ವೇಳೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀಶೈಲಪ್ಪ ಜೋಗೂರ, ಇಂದಿನ ಜಾಗತಿಕ ತಾಪಮಾನ ಗಮನಿಸಿದರೆ ಗಿಡ ಮರಗಳ ಕೊರತೆ ಎಷ್ಟು ಇದೆ ಎಂಬುದು ಉಷ್ಣಾಂಶದ ಮುಖಾಂತರ ತಿಳಿದು ಬರತಾ ಇದೆ.ಹಾಗಾಗಿ ಪರಿಸರದಲ್ಲಿನ ಈ ಅಸಮತೋಲನ ಕಾಪಾಡಿಕೊಂಡು ಹೋಗಬೇಕಾದರೆ ಇಂದು ನಾವೆಲ್ಲರೂ ಜಾಗೃತರಾಗಿ ಪ್ರತಿ ಮನೆ, ರಸ್ತೆ, ಶಾಲೆ ಹೀಗೆ ಎಲ್ಲಿ ಸಾಧ್ಯವೋ ಅಲ್ಲಲ್ಲಿ ಸಸಿಗಳನ್ನು ನೆಟ್ಟು ಅವುಗಳನ್ನು ಸಂರಕ್ಷಣೆ ಮಾಡಲು ಪ್ರತಿಜ್ಞೆ ಮಾಡಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ತಮ್ಮ ಜನ್ಮ ದಿನಾಚರಣೆಯಂದು ಒಂದು ಸಸಿ ಯನ್ನು ನೆಟ್ಟು ಅದರ ಪೋಷಣೆಯ ಜವಾಬ್ದಾರಿ ತೆಗೆದುಕೊಳ್ಳಬೇಕು ಅಂದಾಗ ಮಾತ್ರ ತಮ್ಮ ಹುಟ್ಟು ಹಬ್ಬದ ರೂಪದಲ್ಲಿ ಪರಿಸರಕ್ಕೆ ಅತ್ಯಮೂಲ್ಯ ಕೊಡುಗೆ ಕೊಟ್ಟಂತಾಗುತ್ತದೆ ಎಂದರು.

ಮುಖ್ಯ ಶಿಕ್ಷಕ ಲಕ್ಷ್ಮೀಪುತ್ರ ಕಿರನಳ್ಳಿ ಮಾತನಾಡಿ, ನಾವೆಲ್ಲರೂ ಉಸಿರಾಟಕ್ಕೆ ಆಮ್ಲಜನಕವನ್ನು ಪಡೆದುಕೊಳ್ಳಬೇಕಾದರೆ ಗಿಡಗಳು ಬೇಕೆ ಬೇಕು ಮತ್ತು ನಾವು ಉಸಿರಾಟದ ಮುಖಾಂತರ ಬಿಡುಗಡೆ ಮಾಡುವ ಇಂಗಾಲದ ಡೈಆಕ್ಸೈಡ್ ಅನ್ನು ಗಿಡಗಳು ಪಡೆದುಕೊಂಡು ಜೀವಿಸುತ್ತವೆ ಹಾಗಾಗಿ ನಮಗೂ ಹಾಗೂ ಸಸ್ಯಗಳಿಗೂ ಅವಿನಾಭಾವ ಸಂಬಂಧವಿದೆ. ಆದ್ದರಿಂದ ನಮ್ಮ ಜೀವದ ಪ್ರಮುಖ ಅಂಶವಾದ ಸಸ್ಯಸಂಕುಲವನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವುದು ನಮ್ಮೆಲ್ಲರ ಹೊಣೆ ಎಂದರು. ಈ ವೇಳೆ ಶಿಕ್ಷಕರಾದ ಪ್ರಶಾಂತ ಗಡದೆ, ಲಕ್ಷ್ಮೀಬಾಯಿ ಹಳೆಮನಿ, ಸುವರ್ಣ ಸಾರಂಗಮಠ, ಸರುಬಾಯಿ ಬಂಡಗರ, ಸುನೀತಾ ಗುಂಡದ, ಐಶ್ವರ್ಯ ಬೇಪಾರಿ ಇದ್ದರು.

ಚಂದ್ರಕಾಂತ ದೇವರಮನಿ ನಿರೂಪಿಸಿದರು, ಸೀತಾ ಆರೇಶಂಕರ ವಂದಿಸಿದರು



# ನಿವೃತ್ತ ಶಿಕ್ಷಕರು, ಶಿಕ್ಷಕರ ಸಂಘದ ಪದಾಧಿಕಾರಿಗಳಿಗೆ ಸನ್ಮಾನ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ನಗರದ ಅಬು ಗ್ಯಾಸ್ ಗ್ರೂಪ್ ಹಾಗೂ ಕರ್ನಾಟಕ ಎಲೆಕ್ಟ್ರಾನಿಕಲ್ಸ್ ವತಿಯಿಂದ ನಿವೃತ್ತ ಶಿಕ್ಷಕರು ಹಾಗೂ ನೂತನವಾಗಿ ಆಯ್ಕೆಯಾದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳಿಗೆ ಸನ್ಮಾನ ಸಮಾರಂಭವನ್ನು ಆಯೋಜಿಸಲಾಯಿತು.

ಹಲವು ದಶಕಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿರುವ ನಿವೃತ್ತ ಶಿಕ್ಷಕರಾದ ಬಷೀರ್ ಇನಾಮದಾರ, ರಫೀಕ್ ಬಗಲಿ, ಬಾಬು ಬೇಪಾರಿ ಹಾಗೂ ಇಸ್ಮಾಯಿಲ್ ವಾಲಿಕರ್ ಅವರನ್ನು ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

ನಿವೃತ್ತ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಶಿಸ್ತು, ನೈತಿಕ ಮೌಲ್ಯಗಳು ಹಾಗೂ ಶಿಕ್ಷಣದ ಬಗ್ಗೆ ಆಸಕ್ತಿ ಬೆಳೆಸುವ ಮೂಲಕ ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ನೀಡುವ ಕಾರ್ಯದಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಗಣ್ಯರು ಪ್ರಶಂಸಿಸಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ನೂತನವಾಗಿ ಆಯ್ಕೆಯಾದ ಅಲ್ತಾಫ್ ಬೋರಾಮಣಿ ಅವರನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅಲ್ತಾಫ್ ಬೋರಾಮಣಿ ಅವರು, ಶಿಕ್ಷಕರ ಹಿತಾಸಕ್ತಿ, ಶಿಕ್ಷಣದ ಗುಣಮಟ್ಟದ ಅಭಿವೃದ್ಧಿ ಹಾಗೂ ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವುದಾಗಿ ಭರವಸೆ ನೀಡಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕರಾಗಿ ಆಯ್ಕೆಯಾದ ಶಾಯಿನ್ ಅಂಜು ಮೇಡಂ ಅವರ ಅನುಪಸ್ಥಿತಿಯಲ್ಲಿ ಅವರ ಪತಿ



ಮೊಹಮ್ಮದ್ ಗುಲ್ಬರ್ಗ ಅವರನ್ನು ಸನ್ಮಾನಿಸಿ ಅಭಿನಂದನೆ ಸಲ್ಲಿಸಲಾಯಿತು.

ಹಜರತ್ ಅಲಿ ಮುಲ್ಲಾ, ಇಕ್ಬಾಲ್ ಪಠಾಣ, ಪಾರುಕ ತುರ್ಕಿ, ಅಸ್ಲಾಂ ಪಟೇಲ್, ತುರಾಬ್ ಪಠಾಣ, ಮೊಹಮ್ಮದ್ ರಫೀಕ್ ಜಂಬಗಿ, ಅಬುತಾಲಿಬ್ ಹೊಸೂರು, ಮೊಹಮ್ಮದ್ ಇಶಾಕ್, ಮುನ್ನಾ ಇಂಡಿಕರ್, ಫಯಾಜ್ ಚೌಧರಿ, ಮೆಹಬೂಬ್ ಪಟೇಲ್ (ಪಪ್ಪು), ರಂಜಾನ್ ಇಂಡಿ–ಕರ್, ರಾಜೇಸಾಬ ಭಗವಾನ್, ಹಸನ್ ಮುಜಾವರ್ ಮತ್ತಿತರಿದ್ದರು.

# ಚರಿತ್ರೆ ನಿರ್ಮಿಸಿದ ಪಾಲಿ ಸಂಸ್ಥೆ : ಡಾ.ಕೃಷ್ಣ ಕೋಲ್ಹಾರ ಕುಲಕರ್ಣಿ

ಕಲಬುರಗಿ:ಪಾಲಿ ಇನ್‌ಸ್ಟಿಟ್ಯೂಟವತಿಯಿಂದ ಇಂದು ಕಲಬುರಗಿಯ ಸಿದ್ಧಾರ್ಥ ಕಾನೂನು ಪದವಿ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಇಂಟರ್ ನ್ಯಾಶನಲ್ ಪಾಲಿ ಇನ್ಸ್ ಟಿಟ್ಯೂನ ಗೌರವ ನಿರ್ದೇಶಕರಾದ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರು ಸಂಕಲಿಸಿದ ಪಾಲಿ–ಕನ್ನಡ ಶಬ್ದಕೋಶಗಳ ಐದು ಸಂಪುಟಗಳನ್ನು ವಿಜಯಪುರದ ಹಿರಿಯ ವಿದ್ವಾಂಸರಾದ ಡಾ. ಕೃಷ್ಣ ಕೋಲ್ಹಾರ ಕುಲಕರ್ಣಿಯವರು

ಲೋಕಾರ್ಪಣೆಗೊಳಿಸಿ ಮಾತನಾಡುತ್ತಾ, ಶಬ್ದಕೋಶಗಳು ಓದುಗರನ್ನು ವಿದ್ವತ್ ಲೋಕಕ್ಕೆ ಕೊಂಡೊಯ್ಯುತ್ತವೆ ಎಂದು ಹೇಳಿದರು.

ಪಾಲಿ ಭಾಷೆ ಬಲ್ಲವರು ಕರ್ನಾಟಕದಲ್ಲಿ ಬಹಳ ಕಡಿಮೆ. ಪಾಲಿ ಭಾಷೆ ಕನ್ನಡದಲ್ಲಿ ಬಳಕೆಯಲ್ಲಿಯೂ ಇಲ್ಲ. ಇಂತಹ ಭಾಷೆ ಕುರಿತು ಮಾತನಾಡಲು ತುಂಬಾ ವಿದ್ವತ್ ಬೇಕು. ಮಲ್ಲೇಪುರಂ ಅವರು ಅದಕ್ಕೆ ಅರ್ಹರು. ಪಾಲಿ–ಕನ್ನಡ ಶಬ್ದಕೋಶ ಮಲ್ಲೇಪುರಂ ಅವರಂತಹ ವಿದ್ವಾಂಸರಿಗೆ ಸಾಧ್ಯ. ಅದನ್ನು ಅವರು ಸಮರ್ಥವಾಗಿ ಮಾಡಿದ್ದಾರೆ. ಐದು ಪಾಲಿ ಶಬ್ದಕೋಶ ಸಂಪುಟಗಳು ನನಗೆ ತುಂಬಾ ಸಂತೋಷವನ್ನುಂಟು ಮಾಡಿವೆ. ಕನ್ನಡ ಸಾಹಿತ್ಯಕ್ಕೆ ಈ ಕೋಶಗಳು ಹೆಚ್ಚಿನ ಶ್ರೀಮಂತಿಕೆ ತಂದು ಕೊಡಲಿವೆ ಎಂದರು.

ಲೋಕಾರ್ಪಣೆಗೊಂಡ ಪಾಲಿ–ಕನ್ನಡ ಶಬ್ದಕೋಶಗಳ ಐದು ಸಂಪುಟಗಳ ಕುರಿತು ಪ್ರೊ.ಎಚ್.ಟಿ.ಪೋತೆಯವರು ಪರಿಚಯಾತ್ಮಕವಾಗಿ ಮಾತನಾಡುತ್ತಾ, ಕಲಬುರಗಿಯಲ್ಲಿ ಪಾಲಿ ಇನ್‌ಸ್ಟಿಟ್ಯೂಟ ಬಹುದೊಡ್ಡ ಕನಸು ಹೊತ್ತು ಆರಂಭಗೊಂಡಿದೆ. ಅದರ ಒತ್ತಾಸೆಯಾಗಿ, ಸದಾಶಯದೊಂದಿಗೆ ಡಾ.ಮಲ್ಲಿಕಾರ್ಜುನ ಖರ್ಗೆಯವರ ಮಹಾದಾಸೆಯಿಂದ ಸಂಸ್ಥೆ ಜನ್ಮ ತಳೆದಿದೆ. ಬುದ್ಧನ ಚಿಂತನೆಗಳು, ಮೌಲ್ಯಗಳು ಜನಸಾಮಾನ್ಯರಿಗೆ ಮತ್ತು

ಯುವಪೀಳಿಗೆಗೆ ತಲುಪಿಸಬೇಕಾದ ಅನಿವಾರ್ಯತೆಯಿದೆ ಎಂಬ ಕಾರಣಕ್ಕಾಗಿ ಪಾಲಿ ಅಧ್ಯಯನ ಸಂಸ್ಥೆ ಕಾರ್ಯಪ್ರವೃತ್ತಗೊಂಡಿದೆ. ಇಂತಹ ದೊಡ್ಡ ಸಂಸ್ಥೆಗೆ ಬಹುಶ್ರುತ ಭಾಷಾ ಪಂಡಿತರು, ಶಾಸ್ತ್ರ ಚೂಡಾಮಣಿಗಳು ಮತ್ತು ಅಪಾರ ವಿದ್ವಪೂರ್ಣ ವ್ಯಕ್ತಿತ್ವದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಅವರನ್ನು ಗೌರವ ನಿರ್ದೇಶಕರಾಗಿ ನೇಮಿಸಿದ್ದಾರೆ. ಅದರ ಫಲಶ್ರುತಿಯಾಗಿಯೇ ಹಲವಾರು ಕಾರ್ಯ ಚಟುವಟಿಕೆಗಳು, ಪ್ರಕಟಣೆಗಳು

ನಿರಂತರವಾಗಿ ನಡೆಯುತ್ತಿವೆ. ಇಲ್ಲಿಯವರೆಗೆ ಬುದ್ಧ ಮತ್ತು ಆತನ ಧಮ್ಮ ಕನ್ನಡ ಅನುವಾದ, ಸಂಕ್ಷಿಪ್ತ ಪಾಲಿ–ಕನ್ನಡ ನಿಘಂಟು, ಪ್ರವಾಸಿಗರು ಕಂಡ ಬೌದ್ಧ ಸಂಸ್ಕೃತಿ, ಪಾಲಿ–ಕನ್ನಡ ಶಬ್ದಕೋಶ ಐದು ಸಂಪುಟಗಳಂತಹ ಮೌಲಿಕ ಕೃತಿಗಳನ್ನು ಪ್ರಕಟಿಸುತ್ತಾ ಬಂದಿದೆ. ಪ್ರಸ್ತುತ ಇವು ಬುದ್ಧನ ವಿಚಾರಧಾರೆಗಳು, ಮೌಲ್ಯಗಳು ಅರಿತುಕೊಳ್ಳಲಿಕ್ಕೆ, ಅಧ್ಯಯನ, ಸಂಶೋಧನೆ ಮಾಡುವವರಿಗೆ ಕೈಪಿಡಿಯಂತಿವೆ. ವಿಸ್ತೃತವಾದ

ಮತ್ತು ಅಷ್ಟೇ ಅರ್ಥಪೂರ್ಣವಾದ ಪ್ರಸ್ತಾವನೆಯೊಂದಿಗೆ ಪಾಳಿ ಭಾಷೆಯ ಶಬ್ದಗಳಿಗೆ ಕನ್ನಡ ಅರ್ಥಗಳನ್ನು ನೀಡುವುದರ ಮೂಲಕ ಹೊಸ ಮನ್ವಂತರಕ್ಕೆ ನಾಂದಿ ಹಾಡಿದ್ದಾರೆ. ಓದುಗರ ಜ್ಞಾನ ಕ್ಷಿತಿಜವನ್ನು



ವಿಸ್ತರಿಸಿಕೊಳ್ಳಲು ಈ ಶಬ್ದಕೋಶಗಳು ದಾರಿದೀಪವಾಗಲಿವೆ. ಇಂತಹ ಸಂಪುಟಗಳ ಸದುಪಯೋಗವನ್ನು ಓದುಗರು, ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಸಂಶೋಧಕರು ಪಡೆದುಕೊಳ್ಳಬೇಕೆಂದು ಸದಾಶಯ ವ್ಯಕ್ತಪಡಿಸಿದರು.

ಮುಖ್ಯಅತಿಥಿಗಳಾಗಿ ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಸಚಿವರಾದ ಶ್ರೀ ಸೋಮಲಿಂಗ ಗೆಣ್ಣೂರು ಅವರು ಮಾತನಾಡುತ್ತಾ, ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ಕೂಡ ಬುದ್ಧನ ವಿಚಾರಗಳನ್ನು ತಿಳಿದುಕೊಳ್ಳಲು ಪಾಲಿ ಭಾಷೆ, ಸಂಸ್ಕೃತ ಭಾಷೆಗಳನ್ನು ಅಧ್ಯಯನ ಮಾಡಿದರು. ಆ ಕಾರಣಕ್ಕಾಗಿಯೇ ಬುದ್ಧನ ವಿಚಾರಧಾರೆಗಳನ್ನು ಆಧುನಿಕ ಕಾಲಘಟ್ಟಕ್ಕೆ ಪುನರ್ ಜೀವನಗೊಳಿಸಿದರು. ಬುದ್ಧನ ವಿಚಾರಧಾರೆ, ಬಸವನ ಸಮಾನತೆ ತತ್ವಗಳಿಂದ ಪ್ರಭಾವಿತರಾಗಿಯೇ ಆಧುನಿಕ ಭಾರತದಲ್ಲಿ ಜನಸಾಮಾನ್ಯರಿಗೂ ಸಾಮಾಜಿಕ ನ್ಯಾಯವನ್ನು ಸಂವಿಧಾನ ಬದ್ಧವಾಗಿ ಒದಗಿಸಿಕೊಟ್ಟರು. ಇದಕ್ಕಾಗಿಯೇ ಇವತ್ತು ಸಾಮಾನ್ಯ ವ್ಯಕ್ತಿಯೂ

ಕೂಡ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದಾನೆಂದು ಹೇಳಿದರು.

ಪಾಲಿ–ಕನ್ನಡ ಶಬ್ದಕೋಶಗಳ ಕರ್ತೃಗಳು ಹಾಗೂ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಅವರು ಶಬ್ದಕೋಶಗಳ ಅವಶ್ಯಕತೆ ಕುರಿತು ಸವಿಸ್ತಾರವಾಗಿ ವಿವರಿಸಿದರು. ಒಂದು ಭಾಷೆ ಸಾಹಿತ್ಯದ ಚಿಂತನೆ, ವೈಶಿಷ್ಟ್ಯತೆ, ವೈವಿಧ್ಯತೆಗಳನ್ನು ಅರಿತುಕೊಳ್ಳಬೇಕಾದರೆ ಶಬ್ದಕೋಶದ ಅಗತ್ಯತೆ ಎದ್ದು ಕಾಣುತ್ತಿತ್ತು. ಬುದ್ಧನ ಜೀವಪರ ಚಿಂತನೆ, ಮಾನವೀಯ ಮೌಲ್ಯಗಳು ಅರ್ಥೈಸಿಕೊಳ್ಳಬೇಕಾದರೆ ಪಾಲಿ ಭಾಷೆಯನ್ನು ಅಧ್ಯಯನ ಮಾಡಬೇಕಾಗುತ್ತದೆ. ಹೊಸ ಓದುಗರಿಗೆ ಪಾಲಿ ಅರ್ಥವಾಗಬೇಕಾದರೆ, ಪಾಲಿ– ಕನ್ನಡ ಶಬ್ದಕೋಶ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ. ಈ ಕಾರಣಕ್ಕೆ ಪಾಲಿ–ಕನ್ನಡ ಶಬ್ದಕೋಶ ರಚಿಸಬೇಕೆಂದು ನಿಶ್ಚಯಿಸಿಕೊಂಡು ನಿರಂತರ ಅಧ್ಯಯನ ಪ್ರವೃತ್ತನಾಗಿ ಹಲವಾರು ಶಬ್ದಕೋಶಗಳನ್ನು ಅವಲೋಕಿಸುತ್ತಾ, ಪಾಲಿ ಭಾಷೆಯ ಪದಗಳಿಗೆ ಕನ್ನಡ ಅರ್ಥವನ್ನು ನೀಡುವ ಪ್ರಯತ್ನವನ್ನು ಮಾಡಿದ್ದೇನೆ. ಈ ಶಬ್ದಕೋಶ ನಿರ್ಮಾಣದಲ್ಲಿ ಇಪ್ಪತ್ತಕ್ಕೂ ಹೆಚ್ಚು ವಿದ್ವಾಂಸರು ಕಾರ್ಯನಿರ್ವಹಿಸಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇಂತಹ ಮಹತ್ಕಾರ್ಯಕ್ಕೆ ಸಹಾಯ, ಸಹಕಾರ

ನೀಡಿದವರು ಹಿರಿಯ ಮುತ್ಸದ್ದಿ ರಾಜಕಾರಣಿ, ಜನನಾಯಕ ಆಯುಷ್ಮಾನ್ ಮಲ್ಲಿಕಾರ್ಜುನ ಖರ್ಗೆಜೀಯವರು, ಪಾಲಿ ಇನ್‌ಸ್ಟಿ–ಟ್ಯೂಟನ ಅಧ್ಯಕ್ಷರಾದ ಆಯುಷ್ಮಾನ್ ರಾಹುಲ್ ಖರ್ಗೆಜೀಯವರು ಮತ್ತು

ಸಂಸ್ಥೆಯ ಕಾರ್ಯದರ್ಶಿಗಳಾದ ರಮೇಶ ಬೇಗಾರ್ ಅವರನ್ನು ನೆನೆಯಲೇಬೇಕು ಎಂದರು.

ಇಂತಹ ಮಹತ್ವದ ಕೋಶಗಳನ್ನು ಎಲ್ಲರೂ ಓದಿ ಜ್ಞಾನ ಸಂಪಾದನೆ ಮಾಡಬೇಕು. ಅದಕ್ಕಾಗಿ ಸಂಪುಟಗಳ ಬೆಲೆ ಸಾಮಾನ್ಯರ ಕೈಗೆಟುಕುವಂತಿರಬೇಕು ಎಂದು ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ರಾಹುಲ ಖರ್ಗೆಯವರು ಕಡಿಮೆ ಬೆಲೆಗೆ ನೀಡಬೇಕೆಂದು ಸಂಸ್ಥೆಯ ಗೌರವ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಅವರಿಗೆ ಸಲಹೆ ನೀಡಿದ್ದಾರೆ. ಮುಂದುವರೆದು ಕಲ್ಯಾಣ ಕರ್ನಾಟಕ ಭಾಗದ ನೂರಕ್ಕೂ ಹೆಚ್ಚು ಕಾಲೇಜುಗಳಿಗೆ ಎರಡು ಸಾವಿರದ ಐದುನೂರು ಮುಖ ಬೆಲೆಯ ಐದು ಸಂಪುಟಗಳನ್ನು ಇದೇ ಸಮಾರಂಭದಲ್ಲಿ ಉಚಿತವಾಗಿ ವಿತ–ರಿಸಲಾಯ್ತು. ಕಾರ್ಯಕ್ರಮದಲ್ಲಿ ಶ್ರೀ ರಮೇಶ ಬೇಗಾರ್ ಉಪಸ್ಥಿತ–ರಿದ್ದರು

ಅತಿಥಿಗಣ್ಯರನ್ನು ಡಾ. ಎಂ.ಬಿ.ಕಟ್ಟಿಯವರು ಸ್ವಾಗತಿಸಿದರು, ಪ್ರೊ.ಸೂರ್ಯಕಾಂತ ಅತನೂರ ವಂದಿಸಿದರು, ಡಾ. ಸಂತೋಷಕುಮಾರ ಕಂಬಾರ ನಿರೂಪಿಸಿದರು.

# ಕಾಡು ಉಳಿಸಿ ನಾಡು ಬೆಳೆಸಿ: ಪರಿಸರ ಸಂರಕ್ಷಣೆಗೆ ಎಲ್ಲರೂ ಕೈಜೋಡಿಸಿ

ಜೇವರ್ಗಿ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ತಾಲೂಕು ಕಾನೂನು ಸೇವೆಗಳ ಸಮಿತಿ ಜೇವರ್ಗಿ, ಕೇಂದ್ರ ಸಂಘ ಜೇವರ್ಗಿ, ಅರಣ್ಯ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಜೇವರ್ಗಿಯ ವಿಜಯಪುರ ರಸ್ತೆಯಲ್ಲಿರುವ ಸರ್ಕಾರಿ ಕನ್ಯೆ ಪ್ರೌಢಶಾಲೆಯಲ್ಲಿ ಕಾನೂನು ಸಾಕ್ಷರತೆ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಗೌರವಾನ್ವಿತ ಶ್ರೀ ಕಾಶಿನಾಥ್ ಉಪ್ಪಾರ್, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥ–'ಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಮತ್ತು ಸದಸ್ಯ ಕಾರ್ಯದರ್ಶಿಗಳು, ತಾಲೂಕು ಕಾನೂನು ಸೇವೆಗಳ ಸಮಿತಿ ಜೇವರ್ಗಿ, ಮಾತನಾಡಿ ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. "ಕಾಡು ಉಳಿಸಿ ನಾಡು ಬೆಳೆಸಿ" ಎಂಬ ಸಂದೇಶ ನೀಡಿದ ಅವರು, ಪರಿಸರ ಸಮತೋಲನ ಕಾಪಾಡಲು ಹೆಚ್ಚಿನ ಪ್ರಮಾಣದಲ್ಲಿ ಸಸಿ ನೆಡುವ ಕಾರ್ಯ ಅಗತ್ಯವಾಗಿದ್ದು, ಈ ವರ್ಷ ಸುಮಾರು 10 ಸಾವಿರ ಸಸಿಗಳನ್ನು ನೆಟ್ಟು ಅರಣ್ಯ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.



ವಿಶೇಷ ಉಪನ್ಯಾಸ ನೀಡಿದ ವಕೀಲ ಅಪ್ಪಾಸಾಹೇಬ್ ಅವರು, ಪರಿಸರ ಸಂರಕ್ಷಣೆ ಕೇವಲ ಸರ್ಕಾರದ ಹೊಣೆಗಾರಿಕೆಯಲ್ಲ, ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಎಂದು ಹೇಳಿದರು. ಪ್ರಕೃತಿಯ ಉಳಿವಿಗಾಗಿ ಪ್ರತಿಯೊಬ್ಬರೂ ಕನಿಷ್ಠ ಒಂದು ಸಸಿಯನ್ನು ನೆಟ್ಟು ಅದರ ಪೋಷಣೆ ಮಾಡುವ ಸಂಕಲ್ಪ ಕೈಗೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಗೆ ಸಸಿಗಳನ್ನು ವಿತರಿಸುವ ಮೂಲಕ ಪರಿಸರ ಜಾಗೃತಿ ಮೂಡಿಸಲಾಯಿತು. ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯ ಪ್ರತಿಜ್ಞೆ ಸ್ವೀಕರಿಸಿ, ತಮ್ಮ ಮನೆ ಹಾಗೂ ಶಾಲಾ ಆವರಣದಲ್ಲಿ ಸಸಿ ನೆಟ್ಟು ಬೆಳೆಸುವ ಸಂಕಲ್ಪ ಮಾಡಿದರು.

ಈ ಸಂದರ್ಭದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರಾದ ಬಸಲಿಂಗಮ್ಮ, ನಾಗವೇಣಿ ಧನ್, ವಕೀಲರ ಸಂಘದ ಅಧ್ಯಕ್ಷ ಶಾಂತರಾಜ್ ಪಾಟೀಲ್, ಕಾರ್ಯದರ್ಶಿ ರಾಜಶೇಖರ್ ಶಿಲ್ಪಿ, ಉಪಾಧ್ಯಕ್ಷ ಭಾಷಾ ಪಟೇಲ್ ಯಾಳವಾರ್, ಹಿರಿಯ ವಕೀಲ ಎಂ.ಐ. ಸೂಗೂರು, ವಕೀಲರಾದ ಬೆಣ್ಣೆಪ್ಪ ಕೊಂಬಿನ, ಮಲ್ಲಿಕಾರ್ಜುನ ಸೊನ್ನದ, ನಗರ ವಲಯ ಅರಣ್ಯಾಧಿಕಾರಿ ಪ್ರಿಯಾಂಕ, ಅರಣ್ಯ ಇಲಾಖೆ ಸಿಬ್ಬಂದಿಗಳು, ತಾಲೂಕು ಕಾನೂನು ಸೇವೆಗಳ ಸಮಿತಿಯ ಹುಣಚಿರಾಯ, ಶ್ರೀಕಾಂತ, ಶಾಲೆಯ ಮುಖ್ಯಗುರುಗಳು, ಶಿಕ್ಷಕರು ಹಾಗೂ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪರಿಸರ ಸಂರಕ್ಷಣೆಯ ಮಹತ್ವವನ್ನು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಮನವರಿಕೆ ಮಾಡುವಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿದ್ದು, ಪ್ರಕೃತಿ ಉಳಿವಿನ ಸಂದೇಶವನ್ನು ಪರಿಣಾಮಕಾ–ರಿಯಾಗಿ ಸಾರಿತು.

# ಅನಿಸಿದ್ದೆಲ್ಲವನ್ನು ಮಾಡುವಂತಿದ್ದಿದ್ದರೆ..

## ಭಾವರಶ್ಮಿ

■ ಉದಯರಶ್ಮಿ ದಿನಪತ್ರಿಕೆ

ಹೌದಲ್ಲಾ.. ಅನ್ನಿಸಿದ್ದೆಲ್ಲವನ್ನು ಹೇಳುವಂತಿದ್ದಿದ್ದರೆ ಅಥವಾ ಮಾಡುವಂತಿದ್ದಿದ್ದರೆ ಎಷ್ಟು ಚಂದ ಇರ್ತಿತ್ತು. ಇದು ಪ್ರತಿಯೊಬ್ಬರಿಗೂ ಒಂದಲ್ಲಾ ಒಂದು ಬಾರಿ ಬಂದುಹೋಗುವ ಆಸೆಯೆ.

ಮನಸಿಗೆ ಬಂದ ಮಾತು ಬಾಯಿಗೆ ಬಂದುಬಿಡಬೇಕು. ಬಾಯಿಗೆ ಬಂದ ಮಾತು ತಲುಪಬೇಕಾದವರ ಕಿವಿಗೆ ತಲುಪುತ್ತದೆಯೋ ಇಲ್ಲವೋ. ಒಟ್ಟಿನಲ್ಲಿ ಅಂದುಕೊಂಡವರ ಮನಸು ನಿರಾಳವಾಗುತ್ತದೆ.

ಈ ಹುಡುಗನಿಗೆ ಕಾಸ್ಲಿ ಬೈಕ್ ಸಿಕ್ಕಿಬಿಡಬೇಕು, ಆ ಹುಡುಗಿಗೆ ಆಪಲ್ ಐ ಫೋನ್ ಕೊಡಿಸಿಬಿಡಬೇಕು,


ಕಳ್ಳನಿಗೆ ಕದಿಯಬೇಕು, ಕೊಲೆಗಾರನಿಗೆ ಕೊಲೆ ಮಾಡಬೇಕು, ಪರಪತ್ನಿ ಪರಪತಿ ಆಗಿದ್ದರು ಸಹ ಅವರಿಬ್ಬರೂ ಒಂದಾಗಿಬಿಡಬೇಕು, ಇವನಿಗೆ ಲಾಟರಿ ಹೊಡೆದು ಆಗರ್ಭ ಶ್ರೀಮಂತನಾಗಿಬಿಡಬೇಕು..

ಉಹೂಂ. ಇದಾವುದರ ಬಗ್ಗೆಯೂ ಇವಾಗ ನಾ ಹೇಳಹೊರಟಿಲ್ಲ.

ನಿತ್ಯದ ಬದುಕಿನಲ್ಲಿ ಕಾಡುವ, ಸಾದಾ ಸೀದಾ ಪುಟ್ಟ ವಿಷಯಗಳ ಬಗ್ಗೆಯಷ್ಟೆ ಬೆಳಕು ಚೆಲ್ಲುತ್ತಿದ್ದೇನೆ.

ಅಂದು ಆ ಮಗುವಿನ ನಾಮಕರಣ ಇತ್ತಲ್ಲ, ಹಾಗಾಗಿ ಆ ಫಂಕ್ಷನ್ನಿಗೆ ಹೋಗಿದ್ದೆ. 'ಸಂಗೀತ' ತನ್ನ ಸಂಗೀತ ಶುರುಮಾಡಿದಳು. "ಆ ತಾರಾ ಇದ್ದಾಳಲ್ಲ. ಅವಳು ಹಾಗೆ.. ಅವಳು ಹೀಗೆ.. ಅವಳನ್ನ ನಾನು ಜೀವನದಲ್ಲೆ ಮಾತಾಡಿಸೋಲ್ಲ.. " ಹೀಗೆ ಮುಂದುವರೆದಿದ್ದವು ಆಪಾದನೆಗಳು. ಅವೆಲ್ಲವು ನಿಜವೆ. ಅದು ನನಗೂ ತಿಳಿದ ಸಂಗತಿಯೆ.





ಹಾಗಾಗಿ ಸುಮ್ಮನೆ ಕೇಳುತ್ತಿದ್ದೆ.

ಸ್ವಲ್ಪ ಹೊತ್ತಿನ ನಂತರ ಕಾರ್ಯಕ್ರಮಕ್ಕೆ 'ತಾರಾ'ಳ ಆಗಮನವಾಯಿತು. ನನ್ನ ಪಕ್ಕದಲ್ಲಿ ಕುಳಿತಿದ್ದ ಸಂಗೀತ, ತಾರಾ ಬಂದಕೂಡಲೇ, ಅವಳೆಡೆಗೆ ಎದ್ದುಹೋಗಿ ಬಾಯಿತುಂಬಾ ಮಾತನಾಡಿಸತೊಡಗಿದಳು. ನನಗೆ ಆಶ್ಚರ್ಯ. 'ಅಯ್ಯೋ ದೇವಾ ಇಂತ ಮಾನಗೆಟ್ಟೋವಕ್ಕೆ ಏನು ಹೇಳುವುದು' ಎಂದು ಮನಸಿನಲ್ಲೇ ಅಂದುಕೊಂಡು ಸುಮ್ಮನಾದೆ. ಯಾಕಂದ್ರೆ ಬಾಯಿಬಿಟ್ಟು ಹೇಳುವಂತಿಲ್ಲವಲ್ಲ.

ಆ 'ಮಧುರ' ಇದ್ದಾಳಲ್ಲ ಅವಳಂತ ಬುರುಡೆರಾಣಿ ಮತ್ತೊಬ್ಬ-ರಿಲ್ಲ. ವರ್ಷಕ್ಕೊಂದು ಕೆಲಸ ಬಿಡ್ತಾಳೆ. 'ಅಲ್ಲಿ ಅದು ಸರಿಯಿಲ್ಲ. ಇಲ್ಲಿ ಇದು ಸರಿಯಿಲ್ಲ, ಅದಕ್ಕೆ ಕೆಲಸ ಬಿಟ್ಟುಬಂದೆ' ಅಂತಾಳೆ.

ನಾನು ಸಹ ಅದೇ ಫೀಲ್ಡ್ ನಲ್ಲಿದ್ದೀನಿ ನನಗೂ ಸತ್ಯ ಗೊತ್ತಾಗುತ್ತೆ ಎನ್ನುವ ಭಯವೇ ಇಲ್ಲ. ಅದು ಅವಳು 'ಬಿಟ್ಟದ್ದಲ್ಲ', ಅವರು 'ತೆಗೆದದ್ದು ' ಎಂದು ತಿಳಿದಿದ್ದರೂ ನಾ ಏನೂ ಹೇಳುವಂತಿಲ್ಲ..

ಇನ್ನು 'ನೇಸರ'ಳ ಬಾಸು ದೊಡ್ಡ 'ಸೈಕೊ' ಈ ಪದ ಬೇಕಾ.. ಬೇಕು, ಯಾಕಂದ್ರೆ ಈ ಪದವೇ ತುಂಬಾ ಚೆನ್ನಾಗಿ ಹೊಂದುವುದು. ಹಾಗಾಗಿ ಆ ಪದವನ್ನ ವಿಧಿಯಿಲ್ಲದೆ ಬಳಸಲೇಬೇಕು.

ತನಗಂತು ಮಕ್ಕಳಿಲ್ಲ ಮರಿಯಿಲ್ಲ. ಅದಕ್ಕೆ ಉಳಿದವರನ್ನು ಅಫೀಸಿನಲ್ಲಿಯೇ ಕೂರಿಸಿಕೊಂಡು ಕೂರೋದಾ.. ಒಂದು ದಿನ ಚಂದ ಎರಡು ದಿನ ಚಂದ, ದಿನವೂ ಕಛೇರಿ ಸಮಯ ಮುಗಿದ ಅರ್ಧಗಂಟೆಯ ನಂತರವೂ 'ಇರಿ ' ಎಂದರೆ ಏನು ಹೇಳುವುದು.

ತಾನುಮಾತ್ರ ವಾರಗಟ್ಟಲೆ ಟ್ರಿಪ್ ಹೋಗುತ್ತೆ. ಆದರೆ ನೇಸರಳಿಗೆ ಒಂದು ದಿನ ತನ್ನ ರಜ ತಾನು ತೆಗೆದುಕೊಳ್ಳಲು ಬಿಡುವುದಿಲ್ಲ.

'ತಲೆಬಗ್ಗಿಸಿ ಉಳುವ ಎತ್ತಿಗೆ ಭಾರ ಹೆಚ್ಚು' ಎಂಬಂತೆ, ಯಾರು ಸುಮ್ಮನೆ ಕೆಲಸವನ್ನ ಮಾಡುತ್ತಲೇ ಇರುತ್ತಾರೊ ಅವರಿಗೆ ಮಾತ್ರ ಇವೆಲ್ಲ ಗೋಳು. 'ನಾ ಇರೋದೇ ಹೀಗೆ' ಎನ್ನುವವರಿಗೆ ತಾನೇ ಹೆದರಿ ಸುಮ್ಮನಾಗುತ್ತದೆ. ಬರೀ ತಾರತಮ್ಯ.

ಎಲ್ಲವನ್ನೂ ಮುಂದೆಯೇ ಹೇಳಿಬಿಡಬೇಕು ಎನಿಸುತ್ತೆ ಆದರೆ ಹೇಳುವಂತಿಲ್ಲ. ಕೆಲಸದ ಭಯ.

ಇನ್ನು 'ನಂದಿನಿ' ಮನೆಯ ಪಕ್ಕದೊಂದು ನಾಯಿಬಾಳು.

ಎರಡು ಮಕ್ಕಳು ಹಡೆದದ್ದೇ ದೊಡ್ಡಸಾಧನೆ. ಆ ಮಕ್ಕಳು ಎಷ್ಟು ಕಚ್ಚಾಡಿ ಕಿತ್ತಾಡಿಕೊಂಡರು ಅಮ್ಮ ಎನಿಸಿಕೊಂಡವಳಿಗೆ ಅದರ ಗೋಜೆ ಬೇಕಿಲ್ಲ.

ತನ್ನ ಪಾಡಿಗೆ ತಾನು ಫೋನ್ ನಲ್ಲಿ, ಹಿಂದಿನ ಬೀದಿ ಮುಂದಿನ ಬೀದಿ ಜನರೊಂದಿಗೆ ಹರಟುವುದು, ಶಾಪಿಂಗ್ ಮಾಡುವುದು ಬರೀ ಇದೆ ಕ್ಯಾಮೆ. ಒಮ್ಮೊಮ್ಮೆ ತುಂಬಾ ಕೋಪ ಬಂತು ಎಂದರೆ ಇಬ್ಬರಿಗೂ ಚೆನ್ನಾಗಿ ದನಕ್ಕೆ ಬಡಿದಂಗೆ ಬಡಿದುಬಿಡುವುದು. ಅವು ಬೀದಿಯಲ್ಲಿ ಅಲ್ಲಿ ಇಲ್ಲಿ ಏನೋ ಆಟ ಆಡಿಕೊಂಡೊ, ಕಚ್ಚಾಡಿಕೊಂಡೊ ಹೇಗೋ ಬೆಳದುಕೊಳ್ಳುತ್ತಿವೆ. ಹೀಗಿರುವ ಮಕ್ಕಳೇ ಮುಂದಿನ ದಿನಗಳಲ್ಲಿ ಹೆಚ್ಚು ಸಮಾಜಘಾತುಕರಾಗಿ ಬೆಳೆಯುವುದು ಎಂಬುದು ಉದಾಹರಣೆಗಳಿಂದ ಸಾಬೀತಾದ ವಿಷಯವೆ. ಆದರೆ ಹೆತ್ತವಳಿಗೆ ಅದರ ಗೊಡವೆಯೇ ಇಲ್ಲ.'ಅಯ್ಯೋ ಅದಕ್ಕೆಲ್ಲ ನಾ ತಲೆಕೆಡಿಸಿಕೊಳ್ಳೋಲ್ಲಪ್ಪ. ಅವನ್ನೇ ನೋಡ್ತಾ ಕುತ್ಕೊಂಡ್ರೆ, ನಾ ಎಂಜಾಯ್ ಮಾಡೋದು ಯಾವಾಗ.." ಅಂತಾಳೆ. ಆದರೆ ಯಾರಾದ್ರೂ ನೆಂಟರು ಬಂದಾಗ, ಮಕ್ಕಳಿಂದ ಏನಾದ್ರು ಕೆಲಸ ಮಾಡಿಸಿಕೊಳ್ಳಬೇಕು ಎಂದಾಗ ಮಾತ್ರ 'ಚಿನ್ನ ರನ್ನ' ಅಂತಾಳೆ. ದೊಡ್ಡ 'ಡ್ರಾಮಾ ಕ್ವೀನು'.

ಇದೆಲ್ಲವನ್ನ ಅವಳ ಮುಂದೆ ನೇರವಾಗಿ ಹೇಳೋಕ್ಕಾಗಲ್ಲ... ಹೇಳಿದರು ಪ್ರಯೋಜನವೂ ಇಲ್ಲ.



ಒಮ್ಮೆ 'ಹರಿಣಿ'ಯ ಲವರ್ ಕೇಳಿದ್ರಂತೆ "ನೀನಂದ್ರೆ ನಂಗೆ ತುಂಬಾ ಇಷ್ಟ, ನಿನಗೋಸ್ಕರ ಏನು ಮಾಡಬೇಕು ಹೇಳು ಮಾಡ್ತೀನಿ" ಅಂತ

ಹರಿಣಿ ಹೇಳಿದ್ದಾಳೆ "ಸರಿ ಹಾಗಾದ್ರೆ, ನಾ ಹೇಳ್ತೀನಿ ಅವರನ್ನೆಲ್ಲ ಶೂಟ್ ಮಾಡಿಕೊಂಡು ಬಂದುಬಿಡಿ, ಇಲ್ಲಾಂದ್ರೆ ಚಿಣಟಜಭಿಣ ನಾ ಹೇಳಿದ್ದನ್ನ ಅವರಿಗೆ ಹೇಳಿಬಿಡಿ" ಅಂತ.

ಅವ ನಕ್ಕು ಹೇಳಿದ್ನಂತೆ "ಅಯ್ಯೋ ಪುಣ್ಯಾತ್ಗಿತ್ತಿ ನಿನಗೂ ನನಗೂ ಸಂಬಂಧಪಟ್ಟಿದ್ದು ಮಾತ್ರ ಹೇಳು" ಅಂತ

ಅದು ಸರೀನೇ ಬಿಡಿ 'ಇದು ಮಾಡುವ ಹಾಗಿಲ್ಲ, ಅದು ಮಾಡುವ ಹಾಗಿಲ್ಲ' ಎಂದು ಅಷ್ಟೊಂದು ಕಾನೂನು ಕಟ್ಟಳೆಗಳು, ನಿಯಮಗಳು ಇದ್ದರೂ ಸಹ ಅವುಗಳ ಉಲ್ಲಂಘನೆ ಆಗುತ್ತಿದೆ.

ಇನ್ನೂ ಮನಸಿಗನಿಸಿದ್ದನ್ನ ನೇರವಾಗಿ ಹೇಳುವ, ಮಾಡುವ ಸ್ವಾತಂತ್ರ ಸಿಕ್ಕಿಬಿಟ್ಟರೆ ಎಲ್ಲವೂ ಅಲ್ಲೋಲ ಕಲ್ಲೋಲ.

ಹಾಗಿದ್ದಿದ್ದರೆ.. ಎಂಬ ಚಿಕ್ಕ ಆಸೆ ನುಸುಳಿತು ಅಷ್ಟೆ.

ಲೇಖನ
■ ರಶ್ಮಿ ಕೆ. ವಿಶ್ವನಾಥ್.
ಮೈಸೂರು



# ಕೊಲ್ಹಾರದಲ್ಲಿ ಸಚಿವ ಯತೀಂದ್ರ ಸಿದ್ದರಾಮಯ್ಯನವರಿಗೆ ಭವ್ಯ ಸ್ವಾಗತ



■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ರಾಜ್ಯದ ನಗರಾಭಿವೃದ್ಧಿ ಸಚಿವರಾಗಿ ಪ್ರಪಥಮ ಬಾರಿಗೆ ವಿಜಯಪೂರ ಜಿಲ್ಲೆಗೆ ರವಿವಾರ ಆಗಮಿಸಿರುವ ಡಾ॥ ಯತೀಂದ್ರ ಸಿದ್ದರಾಮಯ್ಯನವರನ್ನು ಕೊರ್ತಿಕೊಲ್ಹಾರ ಸೇತುವೆಯ ಕೊರೆಮ್ಮ ದೇವಸ್ಥಾನ ಹತ್ತಿರ ಕೊಲ್ಹಾರ ಪಟ್ಟಣದ ಕಾಂಗ್ರೇಸ್ ಕಾರ್ಯಕರ್ತರು ಆದ್ದೂ-ರಿಯಾಗಿ ಬರಮಾಡಿಕೊಂಡರು.

ರಾಜ್ಯ ಕಾಂಗ್ರೇಸ್ ಅಲ್ಪಸಂಖ್ಯಾತರ ಘಟಕದ ಉಪಾಧ್ಯಕ್ಷ ಉಸ್ಮಾನಸಾಬ ಪಟೇಲ ಹೂ ಗುಚ್ಛ ನೀಡಿ ಬರಮಾಡಿಕೊಂಡು ಕೊರ್ತಿ ಕೊಲ್ಹಾರ ಸೇತುವೆಯ ಹಾಗೂ ಕೃಷ್ಣಾ ನದಿಯ ಮಹತ್ವ ಮತ್ತು ಇತಿಹಾಸ ಪರಂಪರೆಯ ಉಳ್ಳ ಪಟ್ಟಣದ ಕೆನೆಮೋಸರ ಸವಿಯ ರುಚಿ ಬಗ್ಗೆ ವಿವರಣೆಯನ್ನು ತಿಳಿಸಿದರು. ಹುಬ್ಬಳ್ಳಿ ಮಾರ್ಗವಾಗಿ ವಿಜಯಪೂರ ಜಿಲ್ಲೆಗೆ ಬರುವಾಗ ಕೊಲ್ಹಾರ ಊರು ಹೆಬ್ಬಾಗಿಲು ಇದ್ದಂತೆ ಆಲಮಟ್ಟಿ ಆಣೆಕಟ್ಟಿನ ಹಿನ್ನೀರಿನಲ್ಲಿ ನದಿ ದಂಡೆಯ ಜನರು ಮನೆಮಠ ಜಮೀನು ಕಳೆದುಕೊಂಡು ರಾಷ್ಟ್ರದ ಹಿತಕ್ಕಾಗಿ ತ್ಯಾಗ ಮಾಡಿರುವ ಬಗ್ಗೆ ಸಚಿವ-ರಿಗೆ ಉಸ್ಮಾನ ಪಟೇಲ ಈರಣಗೌಡ ಕೋಮಾರ ಮಾಹಿತಿ ಕೊಟ್ಟಾಗ ಸಚಿವರು ಸಂತ್ರಸ್ತರಿಗೆ ಸೂಕ್ತವಾದ ಪರಿಹಾರ ಸಿಗಲು ನಮ್ಮ ಸರಕಾರ ಕ್ರಮಕೈಗೊಳ್ಳುತ್ತದೆ ನ್ಯಾಯವನ್ನು ದೊರಕಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ಉಸ್ಮಾನಸಾಬ ಪಟೇಲ, ಈರಣಗೌಡ ಬ ಕೊಮಾರ, ಮುಸ್ತಫಾ ಮುಲ್ಲಾ, ಬಾಬುಸಾಬ ಕೂಡಗಿ, ಮಸಾಕಸಾಬ ಬಳಿಗಾರ, ಪಟೇಲ ಬಂದುಗಳು, ಶರಣು ಮಾದರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಪ್ರೊ.ಪೋತೆ"ಮಹಾಯಾನ" ಕಾದಂಬರಿಗೆ ಚುಕ್ಕಿ ಪ್ರತಿಷ್ಠಾನ ಪ್ರಶಸ್ತಿ

ಕಲಬುರಗಿ: ರಾಯಚೂರು ಜಿಲ್ಲೆಯ ಸಿರವಾರದ ಚುಕ್ಕಿ ಪ್ರತಿಷ್ಠಾನ ಕೊಡಮಾಡುವ 2026-27ನೇ ಸಾಲಿನ ಪ್ರಶಸ್ತಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕಲಾ ನಿಕಾಯದ ಡೀನ್ ಹಾಗೂ ಪ್ರಾಧ್ಯಾಪಕರಾದ ಪ್ರೊ. ಎಚ್.ಟಿ.ಪೋತೆ ಅವರ "ಮಹಾಯಾನ" ಕಾದಂಬರಿ ಆಯ್ಕೆಯಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಸೂಗಪ್ಪ ಸಾಹುಕಾರ ಚುಕ್ಕಿ ಅವರು ತಿಳಿಸಿದ್ದಾರೆ. ಲಿಂ.ಉಮಾಪತಿ ಚುಕ್ಕಿಯವರ 50ನೇ ಸುವರ್ಣ ಸ್ಮರಣೋತ್ಸವ ಅಂಗವಾಗಿ ರಾಜ್ಯಮಟ್ಟದ ಪ್ರಶಸ್ತಿಗಾಗಿ ರಾಜ್ಯದ ಬರಹಗಾರರಿಂದ ಕೃತಿಗಳನ್ನು ಆಹ್ವಾನಿಸಲಾಗಿತ್ತು. ಆ ಕೃತಿಗಳಲ್ಲಿ ಪ್ರೊ.ಎಚ್.ಟಿ.ಪೋತೆ ಅವರ "ಮಹಾಯಾನ" ಕಾದಂಬರಿಯನ್ನು ಉತ್ತಮ ಕೃತಿಯಂದು ಪರಿಗಣಿಸಿ ಆಯ್ಕೆ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ. ಜೂ.11 ರಂದು ಸಿರವಾರದ ದೇವದುರ್ಗ ಕ್ರಾಸ್ ಹತ್ತಿರವಿರುವ ಚುಕ್ಕಿ ರುದ್ರಮ್ಮ ಉಮಾಪತೆಪ್ಪ ಕಲ್ಯಾಣ ಮಂಟಪದಲ್ಲಿ ಜರುಗಲಿರುವ ಸಮಾರಂಭದಲ್ಲಿ ಪ್ರೊ. ಎಚ್.ಟಿ.ಪೋತೆ ಅವರಿಗೆ ಫಲ-ಪುಷ್ಪ, 10 ಸಾವಿರ ರೂ.ನಗದು, ಪ್ರಶಸ್ತಿ ಫಲಕ ಮತ್ತು ಪ್ರಮಾಣ ಪತ್ರ ನೀಡಿ ಗೌರವಿಸಲಾಗುವುದು.

ಪ್ರೊ.ಪೋತೆ ಅವರು ನಾಡಿನ ಸಂವೇದನಾಶೀಲ ಕಥೆ, ಕಾದಂಬರಿಕಾರರಾಗಿದ್ದು, ಪ್ರಬಂಧ, ಅನುವಾದ ಮತ್ತು ವೈಚಾರಿಕ ಬರಹಗಾರರಾಗಿದ್ದಾರೆ.

# ಅನುಷಾ ಹೊಸುರ್ ಅಗ್ರಿಯಲ್ಲಿ ರಾಜ್ಯಕ್ಕೆ 3ನೇ & ವೆಟರ್‌ನರಿಯಲ್ಲಿ 4ನೇ ರ‍್ಯಾಂಕ್

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ 2025-26 ನೇ ಸಾಲಿಗೆ ನಡೆಸಿದ ಕರ್ನಾಟಕ ಸಾಮಾನ್ಯ ಅರ್ಹತಾ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು ಈ ಬಾರಿ ವಿಜಯಪುರ ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ರ‍್ಯಾಂಕ್‌ಗಳನ್ನು ಪಡೆದುಕೊಳ್ಳುವ ಮೂಲಕ ಐತಿಹಾಸಿಕ ಸಾಧನೆಗೆ ಸಾಕ್ಷಿಯಾಗಿದ್ದಾರೆ.

ವಿದ್ಯಾರ್ಥಿನಿ ಅನುಷಾ ಹೊಸುರ ಕೆ-ಸಿಇಟಿ ಅಗ್ರಿಯಲ್ಲಿ ರಾಜ್ಯಕ್ಕೆ 3ನೇ ಸ್ಥಾನ ಹಾಗೂ ವೆಟರನರಿ ಸೈನ್ಸ್ ನಲ್ಲಿ ರಾಜ್ಯಕ್ಕೆ 4ನೇ ಸ್ಥಾನ ಪಡೆದುಕೊಂಡರೆ, ನಿಖಿಲ್ ಕಿತ್ತೂರ ಅಗ್ರಿಯಲ್ಲಿ ರಾಜ್ಯಕ್ಕೆ 13ನೇ ಸ್ಥಾನ ಹಾಗೂ ವೆಟರನರಿ ಸೈನ್ಸಿ 20ನೇ ಸ್ಥಾನವನ್ನು ಪಡೆದುಕೊಳ್ಳುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಇವರ ಸಾಧನೆಯ ಕುರಿತು ಪ್ರತಿಕ್ರಿಯಿಸಿದ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಬಸವರಾಜ ಕೌಲಗಿ; ಕಳೆದ ಬಾರಿಯು ಸಹ ವಿದ್ಯಾರ್ಥಿಗಳು ಕೆ-ಸಿಇಟಿ ಅಗ್ರಿ ಹಾಗೂ ವೆಟರ್‌ನರಿಯಲ್ಲಿ ರ‍್ಯಾಂಕ್ ಪಡೆದುಕೊಳ್ಳುವ ಮೂಲಕ ಕಾಲೇಜಿನ ಹೆಸರನ್ನು ಇನ್ನಷ್ಟು ಹೆಚ್ಚು ಮಾಡಿದ್ದರು. ಇಂದು ಈ ವಿದ್ಯಾರ್ಥಿಗಳು ಆ ರ‍್ಯಾಂಕ್ ಪರಂಪರೆಯನ್ನು ಮುಂದುವರಿಸಿದ್ದಾರೆ. ಯಾರು ಪರಿಶ್ರಮ ಪಟ್ಟು ಅಧ್ಯಯನ ಮಾಡುತ್ತಾರೋ ಅವರು ಖಂಡಿತ ಯಶಸ್ಸು ಪಡೆಯುತ್ತಾರೆ ಎನ್ನುವುದಕ್ಕೆ ಈ ವಿದ್ಯಾರ್ಥಿಗಳೇ ಸಾಕ್ಷಿಯಾಗಿದ್ದಾರೆ. ರೈತರ ಮಕ್ಕಳಾಗಿದ್ದುಕೊಂಡು ಅಗ್ರಿಯಲ್ಲಿ ರ‍್ಯಾಂಕ್ ಪಡೆದು ಹೆತ್ತವರ ಕನಸನ್ನು ನನಸು ಮಾಡಿದ ಇವರಿಗೆ ಹೃದಯಪೂರ್ವಕ ಶುಭಾಷಯಗಳನ್ನು ಸಲ್ಲಿಸುತ್ತೇನೆ. ಇಂದು ಈ ವಿದ್ಯಾರ್ಥಿಗಳು ಮಾಡಿದ ಸಾಧನೆ ಪ್ರಸ್ತುತ ಕಲಿಯುವ ಎಲ್ಲ ವಿದ್ಯಾರ್ಥಿಗಳಿಗೂ ಸಹ ಮಾರ್ಗಸೂಚಿಯಾಗಿದ್ದು ವಿದ್ಯಾರ್ಥಿಗಳು ಅವರ ದಾರಿಯನ್ನು ಅನುಸರಿಸಬೇಕು ಎಂದು ಹೇಳಿದರು.

ಅದರ ಜೊತೆಗೆ ಇಂಜಿನೀಯರಿಂಗ್‌ನಲ್ಲಿಯೂ ರ‍್ಯಾಂಕ್‌ಗಳನ್ನು ಪಡೆದುಕೊಂಡ ವಿದ್ಯಾರ್ಥಿಗಳಿಗೂ ಹಾಗೂ ಈ ಐತಿಹಾಸಿಕ ಸಾಧನೆಯ ಹಿಂದೆ ಶ್ರಮವಹಿಸಿದ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೂ ಅಭಿನಂದನೆ ಸಲ್ಲಿಸಿದರು.

ಪ್ರತಿ ವರ್ಷದಂತೆ ಈ ಬಾರಿಯೂ ವಿದ್ಯಾರ್ಥಿಗಳು ಅತ್ಯುತ್ತಮವಾದ ಸ್ಥಾನಗಳನ್ನು ಪಡೆದುಕೊಳ್ಳುವ ಮೂಲಕ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ಅದರಲ್ಲಿ ಸಲ್ಮಾನ್ ಗೋಡಿಹಾಳ (ಇಂಜಿನಿಯ-ರಿಂಗ್, ಬಿ.ಎಸ್.ಸಿ ಅಗ್ರಿ-232, ವೆಟರ್ನರಿ-291), ಪ್ರತೀಕ ಪಿ ಚವ್ಹಾಣ (ಇಂಜಿನಿಯರಿಂಗ್, ಬಿ.ಎಸ್.ಸಿ ಅಗ್ರಿ-264, ವೆಟರ್ನರಿ-1541), ಚೇತನ್ ಮಠದ(ಬಿ.ಎಸ್.ಸಿ ಅಗ್ರಿ-54, ವೆಟರ್ನರಿ-141), ಸಂಕೇತ ಜಿ ಬಿರಾದಾರ(ಇಂಜಿನಿಯರಿಂಗ್), ಅನುಷ್ಕಾ ಮಹಿಶಾಳೆ (ಇಂಜಿನಿಯರಿಂಗ್, ಬಿ.ಎಸ್.ಸಿ ಅಗ್ರಿ-552, ವೆಟರ್ನರಿ-209), ರುಮೇಜಾ ಶೇಖ್(ಇಂಜಿನಿಯ-ರಿಂಗ್, ಬಿ.ಎಸ್.ಸಿ ಅಗ್ರಿ-560, ವೆಟರ್ನರಿ-787), ಮಂಜುನಾಥ ಹೊನವಾಡ(ಇಂಜಿನಿಯರಿಂಗ್-3519), ಆಕಾಶ ಗೊರನಾಳ(ಇಂಜಿನಿಯರಿಂಗ್-3588), ಶೈಲೇಶ ಕುಲಕರ್ಣಿ(ಇಂಜಿನಿಯರಿಂಗ್-3680), ರಜತ ಎನ್ (ಇಂಜಿನಿಯರಿಂಗ್-3685), ರವಿ ಹಳ್ಳೂರ(ಇಂಜಿನಿಯರಿಂಗ್-4107, ಬಿ.ಎಸ್.ಸಿ ಅಗ್ರಿ -1887, ವೆಟರ್ನರಿ - 1856), ನಿಖಿಲ್ ಕಿತ್ತೂರ (ಇಂಜಿನಿಯರಿಂಗ್-4314), ಅಮೋಘ ಬೊಂಬಳೇಕರ್(ಇಂಜಿನಿಯರಿಂಗ್-4517, ಬಿ.ಎಸ್.ಸಿ ಅಗ್ರಿ-2907, ವೆಟರ್ನರಿ-935), ಅನುಷಾ ಹೊಸುರ (ಇಂಜಿನಿಯರಿಂಗ್-4648), ಮಲ್ಲಿಕಾರ್ಜುನ ಹೂಗಾರ (ಇಂಜಿನಿಯರಿಂಗ್-4865 ಬಿ.ಎಸ್.ಸಿ ಅಗ್ರಿ-1232, ವೆಟರ್ನರಿ-437), ಸಹಾನಾ ಮಾವಿನಗಿಡದ (ಇಂಜಿನಿಯರಿಂಗ್-5043), ಮಲ್ಲಿಕಾರ್ಜುನ ಮುಚ್ಚಂಡಿ (ಇಂಜಿನಿಯರಿಂಗ್-5145), ಅನುಷಾ ಎಡವಣ್ಣವರ '(ಇಂಜಿನಿಯರಿಂಗ್-5312), ನಿವೇಶ ಮೋಗಲಿ (ಇಂಜಿನಿಯರಿಂಗ್-5409), ರುಚಿತಾ ಘಟನಟ್ಟಿ (ಇಂಜಿನಿಯರಿಂಗ್-5502), ಚನ್ನವೀರೇಶ ಕುಂಬಾರ (ಇಂಜಿನಿಯರಿಂಗ್-5761)ಬಸವ ಗೊಳಸಂಗಿ(ಇಂಜಿನಿಯರಿಂಗ್-5993) ವಿದ್ಯಾರ್ಥಿಗಳ ಈ ಸಾಧನೆಗೆ ಪ್ರಾಂಶುಪಾಲರಾದ ಮಂಜುನಾಥ ಮ ಜುನಗೊಂಡ, ಶೈಕ್ಷಣಿಕ ಸಂಯೋಜಕ ಮಂಜುನಾಥ ತುಮ್ಮರಮಟ್ಟಿ ಸೇರಿದಂತೆ ಆಡಳಿತ ಮಂಡಳಿಯ ಸರ್ವ ಸದಸ್ಯರು ಹಾಗೂ ಎಲ್ಲ ಬೋಧಕ ಬೋಧಕೇತರ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.



## ಕೆ-ಸಿಇಟಿ ಪರೀಕ್ಷೆಯಲ್ಲಿ ಎಕ್ಸಲಂಟ್ ವಿಜ್ಞಾನ ಪಪೂ ಕಾಲೇಜು ವಿದ್ಯಾರ್ಥಿಗಳ ಅಮೋಘ ಸಾಧನೆ

# ನವ ಕಲ್ಯಾಣ ಕರ್ನಾಟಕ ನಿರ್ಮಾಣಕ್ಕೆ ನೂತನ ಡಿ.ಕೆ.ಸರಕಾರ ಬದ್ಧತೆ ಪ್ರದರ್ಶಿಸಲಿ

ಕಲಬುರಗಿ: ರಾಜ್ಯದಲ್ಲಿ ಡಿ.ಕೆ. ಶಿವಕುಮಾರ ನೇತೃತ್ವದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಸರಕಾರ ಹಿಂದುಳಿದ 371ನೇ (ಜೆ) ಕಲಂ ವಿಶೇಷ ಸ್ಥಾನ ಪಡೆದಿರುವ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಕಾಲಮಿತಿಯಲ್ಲಿ ನೂತನ ಕಲ್ಯಾಣ ಕರ್ನಾಟಕ ನಿರ್ಮಾಣ ಮಾಡಲು ನೀಲಿ ನಕ್ಷೆಯನ್ನು ನಿರ್ಮಿಸಿ ವೈಜ್ಞಾನಿಯ ಕ್ರೀಯಾ ಯೋಜನೆಯ ಆಧಾರದ ಮೇಲೆ ನೀರಾವರಿ, ಕೈಗಾರಿಕೆ, ರಸ್ತೆ, ಸಾರಿಗೆ, ಶಿಕ್ಷಣ, ಉದ್ಯೋಗ, ಪ್ರವಾಸೋಧ್ಯಮ, ಕ್ರೀಡೆ ಸೇರಿದಂತೆ ಸಮಗ್ರ ಕ್ಷೇತ್ರಗಳ ಅಭಿವೃದ್ಧಿಗೆ ಕಾಲಮಿತಿಯ ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಕಲ್ಯಾಣದ ನೂತನ ಸಚಿವರಾದ ಪ್ರಿಯಾಂಕ ಖರ್ಗೆ, ಈಶ್ವರ ಖಂಡ್ರೆ, ಡಾ. ಶರಣಪ್ರಕಾಶ ಪಾಟೀಲರವರು ಗಂಭೀರವಾಗಿ ಪರಿಗಣಿಸಬೇಕೆಂದು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಕೋರ್ ಕಮಿಟಿಯ ಮುಖಾಂತರ ಒತ್ತಾಯಿಸಲಾಯಿತು.

ಭಾನುವಾರ ಶರಣಬಸವೇಶ್ವರ ದೇವಸ್ಥಾನದ ದಾಸೋಹ ಮಹಾ ಮನೆಯಲ್ಲಿ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಸಭೆಯು ಸಮಿತಿಯ ಗೌರವಾಧ್ಯಕ್ಷರಾದ ಬಸವರಾಜ ದೇಶಮುಖ ಅವರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿ ಸಭೆ ಜರುಗಿತು. ಸಭೆಗೆ ಸಮಿತಿಯ ಅಧ್ಯಕ್ಷರಾದ ಲಕ್ಷ್ಮಣ ದಸ್ತಿಯವರು ಕಲ್ಯಾಣದ 371ನೇ(ಜೆ) ಕಲಂ ಜಾರಿಯಾದ ನಂತರ ಸಾಧನೆಗಳ ಮತ್ತು ಆಶಯಗಳ ವಿವರಣೆ ನೀಡಿದರು. ಅದರಂತೆ ಕೆ.ಕೆ.ಆರ್.ಡಿ.ಬಿ.ಯ ಅಸ್ಪಷ್ಟ ಧೋರಣೆ, ಅದೇ ರೀತಿಯಾಗಿ ರಾಜ್ಯ ಸರಕಾರ ಈಗಾಗಲೆ ಘೋಷಣೆ ಮಾಡಿರುವ ಪ್ರತ್ಯೇಕ ಸಚಿವಾಲಯದ ವಿಳಂಬ ನೀತಿಯ ಬಗ್ಗೆ ಪ್ರಸ್ತಾಪಿಸಿದರು. ಪ್ರೊ.ಆರ್.ಕೆ. ಹುಡುಗಿಯವರು ಮಾತನಾಡಿ ಕಲ್ಯಾಣದ ಅಭಿವೃದ್ಧಿಯ ಬಗ್ಗೆ ಸಚಿವರಾದ ಪ್ರಿಯಾಂಕ ಖರ್ಗೆಯವ ರೊಂದಿಗೆ ಸಮಾಲೋಚನೆ ನಡೆಸಿ ಪ್ರಸ್ತಾವನೆ ನೀಡುವ ಬಗ್ಗೆ ಮಾಟನಾಡಿದರು. ಪ್ರೊ. ಬಸವರಾಜ ಕುಮನೂರವರು ಮಾತನಾಡಿ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಉದ್ದೇಶ ದಾರಿ ತಪ್ಪುತ್ತಿದೆ, ಈ ಬಗ್ಗೆ ಆದಷ್ಟು ಶೀಘ್ರ, ಮಂಡಳಿಯ ಕಾರ್ಯದರ್ಶಿಗಳು, ಅಧ್ಯಕ್ಷರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿ ಮಾಡಾಬೇಕೆಂದು ಆಗ್ರಹಿಸಿದರು. ಸಭಗೆ ಸನಾಉಲ್ಲಾ, ಕೈಲಾಸನಾಥ ದೀಕ್ಷಿತ್, ಲಿಂಗರಾಜ ಸಿರಗಾಪೂರ, ಸಂಧ್ಯಾರಾಜ ಮಾತನ್ನಾಡಿ ಸಲೆಹೆಗಳು ನೀಡಿದರು. ಸಭೆಯಲ್ಲಿ ಸರ್ವಾನುಮತದಿಂದ ಕೈಗೊಂಡ ನಿರ್ಣಯದಂತೆ ' ಕಲ್ಯಾಣ ಕರ್ನಾಟಕದಲ್ಲಿ ಖಾಲಿ ಇರುವ ಹುದ್ದೆಗಳ ಅಭ್ಯರ್ಥಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು. ಅದರಂತೆ, ಗುಲಬರ್ಗಾ ವಿಶ್ವವಿದ್ಯಾಲಯ ಸೇರಿದಂತೆ, ಎಲ್ಲಾ ವಿಶ್ವವಿದ್ಯಾಲಯದ ಗುಣಮಟ್ಟ ಹೆಚ್ಚಿಸಲು ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಕಠಿಣ ಕ್ರಮ ಕೈಗೊಳ್ಳಬೇಕು, ಕಲ್ಯಾಣ ಕರ್ನಾಟಕ ಪ್ರದೇಶದ ಕಾಲಮಿತಿಯ ಅಭಿವೃದ್ಧಿಗೆ 5 ಇಲ್ಲವೆ 10 ವರ್ಷದ ವೈಜ್ಞಾನಿಕ ಕ್ರೀಯಾ ಯೋಜನೆ ರಚಿಸಿ ಈ ಯೋಜನೆಯಂತೆಯೆ ರುಟಿನ್ ಬಜೆಟನ ಯೋಜನೆಗಳು ಮತ್ತು ಕೆ.ಕೆ. ಆರ್.ಡಿ.ಬಿ. ಯೋಜನೆಗಳು ಅನುಷ್ಠಾನಕ್ಕೆ ತಂದು ಕಾಲಮಿತಿಯಲ್ಲಿ ಕಲ್ಯಾಣದ ಅಭಿವೃದ್ಧಿಗೆ ದಿಟ್ಟತನ ಕೈಗೊಳ್ಳಬೇಕು, ಕಲ್ಯಾಣ ಕರ್ನಾಟಕದಲ್ಲಿ ಈಗಾಗಲೆ ಆರಂಭಿಸಿರುವ ನೀರಾವರಿ ಯೋಜನೆಗಳು ಪೂರ್ಣಗೊಳಿ ಸುವವರೆಗೆ ಬೇರೆ ಯೋಜನೆಗಳು ಕೈಗೆತ್ತಿಕೊಳ್ಳಬಾರದು, ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕಲ್ಯಾಣ ಪಥದ ರಸ್ತೆ ನಿರ್ಮಾಣ ಮತ್ತು ಬೀದರದಿಂದ ಬಳ್ಳಾರಿಯವರೆಗೆ ಚತುಸ್ಪಥ ರಸ್ತೆ ನಿರ್ಮಿಸಿ, ಕೈಗಾರಿಕೆ, ವಾಣಿಜ್ಯ ಮತ್ತು ಕೃಷಿ ಕ್ಷೇತ್ರಕ್ಕೆ ಉತ್ತೇಜನ ನೀಡಲು ತಕ್ಷಣ ಕಾಲಮಿತಿಯ ಕ್ರಮ ಕೈಗೊಳ್ಳಬೇಕು, ಗೋವಿಂದರಾವ ಕಮಿಟಿಯಲ್ಲಿ ತಿಳಿಸಿರುವಂತೆ ಬಸವಕಲ್ಯಾಣದಿಂದ ಬಾಗೇವಾಡಿಯವರೆಗೆ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಿ ಜಗತ್ತಿಗೆ ನಮ್ಮ ಶ್ರೀಮಂತ ಇತಿಹಾಸದ ಪರಿಚಯ ಮಾಡಿಸುವುದರ ಜೊತೆಗೆ ಲೆಕ್ಕವಿಲ್ಲದಷ್ಟು ಉದ್ಯೋಗಗಳು ಸೃಷ್ಟಿಗೆ ಅನುಕೂಲವಾಗುವುದು ಈ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು, ನೂತನ ಸರಕಾರದಲ್ಲಿ ಮೂರು ಪ್ರಭಾವಿ ಖಾತೆಗಳೊಂದಿಗೆ ಸಚಿವರಾಗಿದ್ದಾರೆ. ಇನ್ನೂ ಕನಿಷ್ಠ ಐದು ಜನ ಸಚಿವ ಸ್ಥಾನಗಳು ಕಲ್ಯಾಣ ಕರ್ನಾಟಕಕ್ಕೆ ಕೊಡಬೇಕು, ಕೃಷ್ಣಾ ಯೋಜನೆ ಕೇಂದ್ರ ಸರಕಾರದ ಸುಪರ್ಧಿಗೆ ವಹಿಸಿ ಕಾಲಮಿತಿಯಲ್ಲಿ ಈ ಯೋಜನೆ ಪೂರ್ಣಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ಕೇಂದ್ರದ ಮೇಲೆ ಬಲವಾದ ಒತ್ತಡ ತರಬೇಕು, ಕಲಬುರಗಿಯಲ್ಲಿ ಕನಿಷ್ಠ ಐದು ಮೇಲ್ಸೇತುವೆ ರಸ್ತೆಗಳ ನಿರ್ಮಾಣ ಮತ್ತು ಹದಗೆಟ್ಟ ರಸ್ತೆಗಳಿಗೆ ತಕ್ಷಣ ಹೊಸ ರಸ್ತೆಗಳ ನಿರ್ಮಾಣ ಮಾಡಿ ಗುಂಡಿಗಳನ್ನು ಮುಚ್ಚುವ ಕಾರ್ಯಗಳನ್ನು ಮಾಡಬೇಕು, ಏಮ್ಸ್ ಹೋರಾಟಕ್ಕೆ ಸ್ಪಂದಿಸಿ ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ ಮಾಡಬೇಕು.

# ವ್ಯಸನಮುಕ್ತ ಸಮಾಜ ನಿರ್ಮಾಣ ನಮ್ಮ ಗುರಿ : ಡಾ.ಅಲ್ಲಮಪ್ರಭು ಶ್ರೀ



■ ಉದಯರಶ್ಮಿ ದಿನಪತ್ರಿಕೆ

ಜಮಖಂಡಿ: ವ್ಯಸನಮುಕ್ತ ಸಮಾಜ ನಿರ್ಮಾಣ ಮಾಡುವುದೇ ನಮ್ಮ ಗುರಿ ಎಂದು ಡಾ.ಅಲ್ಲಮಪ್ರಭು ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ತುಬಚಿ ಗ್ರಾಮದ ಶ್ರೀ ಶಿವಲಿಂಗೇಶ್ವರ ಆವರಣದಲ್ಲಿ ನಡೆದ ದುಶ್ಚಟಗಳ ಭಿಕ್ಷೆ ಸದ್ಗುಣಗಳ ದೀಕ್ಷೆ ಎಂಬ ಕಾರ್ಯಕ್ರಮ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಪೂಜ್ಯರು, ಸಮಾಜದಿಂದ ಮದ್ಯಪಾನ, ಧೂಮಪಾನ ಸೇರಿದಂತೆ ವಿವಿಧ ವ್ಯಸನಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಿ, ಆರೋಗ್ಯಕರ ಮತ್ತು ಆದರ್ಶ ಸಮಾಜವನ್ನು ನಿರ್ಮಿಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಿದೆ ಎಂದು ಹೇಳಿದರು.

ಜಮಖಂಡಿಯ ಓಲೆ ಮಠದ ಆನಂದ ದೇವರು ಮಾತನಾಡಿ, ವ್ಯಸನಗಳು ವ್ಯಕ್ತಿಯ ಜೀವನವನ್ನು ಮಾತ್ರವಲ್ಲದೆ, ಇಡೀ ಕುಟುಂಬವನ್ನೆ ಬೀದಿಪಾಲು ಮಾಡುತ್ತವೆ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಇಂತಹ ಪಿಡುಗುಗಳನ್ನು ಬುಡಸಮೇತ ಕಿತ್ತೊಗೆಯಬೇಕಿದೆ. ಆಧ್ಯಾತ್ಮಿಕ ಚಿಂತನೆ ಮತ್ತು ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ವ್ಯಸನಮುಕ್ತ ಸಮಾಜವನ್ನು ನಿರ್ಮಿಸಲು ನಾವೆಲ್ಲರೂ ಸಂಕಲ್ಪ ಮಾಡಬೇಕು ಎಂದು ಮಾತನಾಡಿದರು.

ಇದೇ ಸಂದರ್ಭದಲ್ಲಿ ಬಸವರಾಜೇಂದ್ರ ಶರಣರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಹಿರಿಯರಾದ ಬಸಯ್ಯ ಮಠದ, ಸಂಗಯ್ಯ ಮಠಪತಿ, ಸುರೇಶಗೌಡ ಪಾಟೀಲ, ಅಣ್ಣಪ್ಪ ತೊನಶ್ಯಾಳ, ಈರಪ್ಪ ಸಿಂಧೂರ, ಬಸವರಾಜ ಪಾಟೀಲ, ಸೋಮಲಿಂಗಪ್ಪ ಕರಬಸನವರ, ಶಿವಲಿಂಗಪ್ಪ ಕುಂಬಾರ, ಶಿವಪ್ಪ ಶೇಗಾಂವಿ, ಮುತ್ತಪ್ಪ ಕುಂಬಾರ, ಬಸವರಾಜ ಬಿರಾದಾರ, ನಿಂಗಪ್ಪ ಬೋರಾಳ, ಮಾದೇವ ಬ್ಯಾಡಗಿ, ಸದಾಶಿವ ಕವಟಗಿ, ಅಪಸಾಬ ಬಿರಾದಾರ, ರಾವಸಾಬ ದಳವಾಯಿ, ಶಿವಲಿಂಗಪ್ಪ ಹೊನವಾಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ವಿದ್ಯುತ್ ಖಾಸಗಿಕರಣ ವಿರೋಧಿಸಿ ರೈತರಿಂದ ಪ್ರತಿಭಟನೆ

## ಟಾಟಾ ಪವರ್ ಕಂಪನಿಗೆ ನೀಡಿದರೆ ರೈತಸಂಘದಿಂದ ರಾಜ್ಯಾದ್ಯಂತ ಉಗ್ರ ಹೋರಾಟ ಎಚ್ಚರಿಕೆ

■ ಉದಯರಶ್ಮಿ ದಿನಪತ್ರಿಕೆ




ಅಥಣಿ: ಇಂಧನ ಮತ್ತು ಗ್ಯಾಸ್ ಬೆಲೆಯನ್ನು ಹೆಚ್ಚಿಸುವ ಮೂಲಕ ರೈತರ ಮತ್ತು ಜನಸಾಮಾನ್ಯರ ಜೊತೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಚೆಲ್ಲಾಟವಾಡುತ್ತಿವೆ, ರೈತರಿಗೆ ಮತ್ತು ಜನಸಾಮಾನ್ಯರಿಗೆ ಅಗತ್ಯವಾಗಿರುವ ವಿದ್ಯುತ್ ಶಕ್ತಿಯನ್ನು ಖಾಸಗಿಕರಣ ಮಾಡುತ್ತಿರುವುದು ವಿಷಾದನೀಯ, ಇದರಿಂದ ರೈತರ ಮತ್ತು ಅನೇಕ ಕಾರ್ಮಿಕರ ಬದುಕು ಅತಂತ್ರವಾಗುತ್ತದೆ, ಯಾವುದೇ ಕಾರಣಕ್ಕೂ ಇದನ್ನ ಖಾಸಗಿಕರಣಗೊಳಿಸಬಾರದು ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಅಧ್ಯಕ್ಷ ಮಹಾದೇವ ಮಡಿವಾಳ ರಾಜ್ಯ ಸರ್ಕಾರವನ್ನ ಆಗ್ರಹಿಸಿದರು.

ಅವರು ಶನಿವಾರ ಇಲ್ಲಿನ ಮಿನಿ ವಿಧಾನಸೌಧ ಕಾರ್ಯಾಲಯದ ಮುಂದೆ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು. ಈ ವೇಳೆ ಮಾತನಾಡಿದ ಅವರು ಕೇಂದ್ರ ಮತ್ತು ರಾಜ್ಯ ಸರಕಾರಗಳು ರೈತರ ಜೊತೆ ಚೆಲ್ಲಾಟವಾಡುತ್ತಿದ್ದು, ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ನೀಡದೆ ಮೋಸ ಮಾಡುತ್ತೇವೆ. ಈಗಾಗಲೇ ನಮ್ಮ ರೈತರ ಬದುಕು ಸ್ವತಂತ್ರವಾಗಿದ್ದು, ಸಂಕಷ್ಟದಲ್ಲಿರುವ ರೈತರಿಗೆ ಸರ್ಕಾರ ಉಚಿತ ವಿದ್ಯುತ್ ನೀಡುವ ಬದಲು ಖಾಸಗಿಕರಣ ಮಾಡುತ್ತಿರುವುದು ಗಾಯದ ಮೇಲೆ ಬರೆ ಎಳೆದಂತೆ. ಸಿಎಂ ಡಿಕೆ ಶಿವಕುಮಾರ್ ಹಾಗೂ ಇಂಧನ ಸಚಿವರಾದ ಕೆ ಜಿ ಜಾರ್ಜ್ ಅವರು ಹೆಸ್ಕಾಂ ಸಂಸ್ಥೆಯನ್ನು ಟಾಟಾ ಪವರ್ ಕಂಪನಿಗೆ ವಹಿಸುವ ಮೂಲಕ ಖಾಸಗಿಕರಣ ಗೊಳಿಸುತ್ತಿರುವಕ್ಕೆ ನಮ್ಮದು ವಿರೋಧವಿದೆ. ರಾಜ್ಯ ಸರ್ಕಾರ ಈ ರೈತ ವಿರೋಧಿ ನೀತಿಯನ್ನ ಕೂಡಲೇ ಕೈಬಿಡಬೇಕು ಎಂದು ಅಗ್ರಹಿಸಿದರು.

ರಾಜ್ಯದಲ್ಲಿಯೇ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಬಳಕೆದಾರರಾಗಿರುವ ಗ್ರಾಮೀಣ ಭಾಗದ ರೈತಾಪಿ ವರ್ಗದವರು ಹಾಗೂ ಕೂಲಿ ಕಾರ್ಮಿಕರು ಮತ್ತು ಮತ್ತು ವಿದ್ಯುತ್ ಬಳಕೆಯಿಂದಲೆ ತಮ್ಮ ಕೆಲಸದನ್ನು ನಂಬಿಕೊಂಡಿರುವ ಹಲವಾರು ರೈತರು ಹಾಗೂ ಕಾರ್ಮಿಕರಿಗೆ ಇದರಿಂದ ಭಾರೀ ಹಾನಿಯಾಗುವ ಸಂಭವ ಇರುತ್ತದೆ, ಕಾರಣ ರೈತರು ಬಡ ಗ್ರಾಹಕರು ಸಬ್ಸಿಡಿ ಆಧಾರಿತ ಗ್ರಾಹಕರಾಗಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಹೆಸ್ಕಾಂ ಸಂಸ್ಥೆಯನ್ನು ಟಾಟಾ ಪವರ ಕಂಪನಿಗೆ ಹಸ್ತಾಂತರಿಸುವುದನ್ನು ಕೈ ಬಿಡಬೇಕು. ಇಲ್ಲವಾದರೆ ರಾಜ್ಯದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ರೈತ ಸಂಘದ ಮುಖಂಡರಾದ ಸಂಗಪ್ಪ ಕರಿಗಾರ, ರಮೇಶ ಕುಂಬಾರ, ಬಾಹುಬಲಿ ಸಂಕಣ್ಣವರ, ಕಿರಣ್ ಮೀಸಾಳ, ದುಂಡಪ್ಪ ತನಂಗಿ, ಮಹದೇವ ಕುಚುನೂರ, ಲಕ್ಕಪ್ಪ ಪೂಜಾರಿ, ಜಗದೀಶ ಮರೆಗುದ್ದಿ, ಶಿವಾನಂದ ಮಗದುಮ್ಮ, ನಿಂಗಪ್ಪ ಉದ್ದಾನಗೋಳ, ಹನುಮಂತ ಮಹೇಶವಾಡಗಿ, ಮಹದೇವ್ ಹೊಸಮನಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಜಾಲವಾದ ಗ್ರಾಮೀಣ ಬ್ಯಾಂಕ್‌ನಲ್ಲಿ ವಿಳಂಬತೆ ತಪ್ಪಿಸಲು ಗ್ರಾಹಕರ ಆಗ್ರಹ



■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಜಾಲವಾದ ಗ್ರಾಮದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಶಾಖೆಯಲ್ಲಿ ಸಿಬ್ಬಂದಿಗಳ ಕೊರತೆಯಿಂದ ಗ್ರಾಹಕರು ಸಾಲಿನಲ್ಲಿ ನಿಂತು ಕಾಯುವಂತಾಗಿದ್ದು ಕೂಡಲೇ ಹೆಚ್ಚಿನ ಸಿಬ್ಬಂದಿ ನೇಮಿಸಿ ವಿಳಂಬತೆ ತಪ್ಪಿಸುವಂತೆ ಗ್ರಾಮದ ಗ್ರಾಹಕರು ಆಗ್ರಹಿಸಿದ್ದಾರೆ.

ತಾಲ್ಲೂಕಿನ ಜಾಲವಾದ ಗ್ರಾಮದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಸ್ಥಳೀಯ ರೈತ ಸಮುದಾಯಕ್ಕೆ ಆಧಾರವಾಗಿದೆ. ಆದರೆ ಈಗ ಸಿಬ್ಬಂದಿಗಳ ಕೊರತೆಯ ಕಾರಣವಾಗಿ ಗ್ರಾಹಕರು ಗಂಟೆಯವರೆಗೆ ಸಾಲಿನಲ್ಲಿ ನಿಲ್ಲುವಂತಾಗಿದೆ. ಅದರಲ್ಲೂ ರೈತರು ಬಿತ್ತನೆ ಬೀಜ, ಗೊಬ್ಬರಕ್ಕಾಗಿ ಹಣ ಪಡೆಯಲು ನಿತ್ಯ ಕಾಯುವುದು ಅನಿವಾರ್ಯವಾಗಿದೆ.

ಇಲ್ಲಿ ಎರಡು ಗಂಟೆಗಳ ಕಾಲ ನಿಂತು ಹಣ ಪಡೆದು ನಂತರ ಬೀಜ, ಗೊಬ್ಬರಗಳಿಗಾಗಿ ಮತ್ತೇ ಸರದಿಯಲ್ಲಿ ನಿಲ್ಲುವಂತಾಗಿದೆ. ಈ ಬಗ್ಗೆ ಬ್ಯಾಂಕಿನ ಹಿರಿಯ ಅಧಿಕಾರಿಗಳ ಗಮನ ಸೆಳೆದು ವಿನಂತಿ ಮಾಡಿದರೂ ಪ್ರಯೋಜನವಾಗಿಲ್ಲ. ಆದ್ದರಿಂದ ಕೂಡಲೇ ಹೆಚ್ಚುವರಿ ಸಿಬ್ಬಂದಿ ನೇಮಿಸಿ ಗ್ರಾಹಕರ ತೊಂದರೆ ತಪ್ಪಿಸಲಿ ಎಂದು ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರುಸೇನೆಯ ಭೀಮರಾಯ ಮನಗೂಳಿ, ಸಲೀಮ್ ಮುಲ್ಲಾ, ಧರೇಶ ಪಾಟೀಲ, ಚಂದ್ರಾಮ ಗಾಂಜಿ, ರಾಜು ಕಲಕೇರಿ, ಡಿ.ಎ. ಇನಾಮದಾರ ಆಗ್ರಹಿಸಿದ್ದಾರೆ.

# ರೈತರಿಗೆ ಇನ್ನು ನಿರಂತರ ವಿದ್ಯುತ್ ಭಾಗ್ಯ :ಶಾಸಕ ಸವದಿ

## ಸಂಕೋನಟ್ಟಿಯಲ್ಲಿ ರೂ.21.52 ಕೋಟಿ ವೆಚ್ಚದ ನೂತನ ವಿದ್ಯುತ್ ಉಪಕೇಂದ್ರಕ್ಕೆ ಶಾಸಕ ಸವದಿ ಚಾಲನೆ



ಅಥಣಿ: ಸಂಕೋನಟ್ಟಿ ಗ್ರಾಮ ವ್ಯಾಪ್ತಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕೆಪಿಟಿಸಿಎಲ್) ವತಿಯಿಂದ ನಿರ್ಮಿಸಲಾಗುತ್ತಿರುವ 110/11 ಕೆ.ವಿ. ನೂತನ ವಿದ್ಯುತ್ ಉಪಕೇಂದ್ರದ ಕಾಮಗಾರಿಗೆ ಶಾಸಕ ಲಕ್ಷ್ಮಣ ಸವದಿ ಅವರು ಭೂಮಿ ಪೂಜೆ ಸಲ್ಲಿಸಿದರು.

ಈ ಯೋಜನೆಯು ಈ ಭಾಗದ ರೈತರಿಗೆ ಮತ್ತು ಗ್ರಾಮೀಣ ಜನತೆಗೆ ವರದಾನವಾಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಸ್ತುತ ಸಂಕೋನಟ್ಟಿ 33/11 ಕೆ.ವಿ. ಉಪಕೇಂದ್ರದ ಮೇಲೆ ಹೆಚ್ಚಿನ ಒತ್ತಡವಿದ್ದ ಕಾರಣ, ಸುತ್ತಮುತ್ತಲ ಗ್ರಾಮಗಳಲ್ಲಿ ಕಡಿಮೆ ವೋಲ್ಟೇಜ್ ಮತ್ತು ಪದೇ ಪದೇ ವಿದ್ಯುತ್ ವ್ಯತ್ಯಯದ ಸಮಸ್ಯೆ ಉಂಟಾಗುತ್ತಿತ್ತು. ನೂತನ ಉಪಕೇಂದ್ರದಿಂದ ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗಲಿದೆ. ವಿಶೇಷವಾಗಿ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಹಗಲು ವೇಳೆಯಲ್ಲಿ 7 ಗಂಟೆಗಳ ಕಾಲ ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಪೂರೈಕೆಯಾಗಲಿದೆ ಎಂದು ಶಾಸಕರು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಲಕ್ಷ್ಮಣ ಸವದಿ ಅವರು, "ಗ್ರಾಮೀಣಾಭಿವೃದ್ಧಿಗೆ ವಿದ್ಯುತ್ ಮೂಲಸೌಕರ್ಯ ಅತಿ ಅಗತ್ಯ. ಭವಿಷ್ಯದ ವಿದ್ಯುತ್ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಸರ್ಕಾರದ ಸಹಕಾರದೊಂದಿಗೆ ಅಥಣಿ ಕ್ಷೇತ್ರವನ್ನು ರಾಜ್ಯದಲ್ಲೇ ಮಾದರಿ ಕ್ಷೇತ್ರವನ್ನಾಗಿ ಮಾಡುವ ಗುರಿ ಹೊಂದಿದ್ದೇವೆ" ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಕೆಪಿಟಿಸಿಎಲ್‌ನ ಮೇಜರ್ ವರ್ಕ್ಸ್ ಎಂಜಿನಿಯರ್‌ಗಳು, ಅಧಿಕಾರಿಗಳಾದ ಸಂಜಯ್ ಗೊಣಜಾಲ, ಸಂಪನ್ನವರ, ಎಸ್ .ಪಾರ್ಥನಳ್ಳಿ, ಅನಿಲ ರಾವ್ ದೇಶಪಾಂಡೆ, ಗುತ್ತಿಗೆದಾರ ಅಜಯ ದೇಶಪಾಂಡೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಅಶೋಕ್ ಸನಾಳ, ಮಲ್ಲಪ್ಪ ಅವಟಿ, ಅನಂತ್ ಬಸರಿಕೋಡಿ , ಲಕ್ಷ್ಮಣ ಮುಗಳಕೊಡ, ಅಶೋಕ್ ಕೌಜಲಗಿ, ರಾಹುಲ್ ನಾಯ್ಕ, ಮಲ್ಲು ಕೊಳ್ಳೋಲಿ, ಮುತ್ತು ಮೊಕಾಸಿ ಸೇರಿದಂತೆ ಸ್ಥಳೀಯ ರೈತರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

# ಓದಬೇಕೆಂಬ ಹಸಿವಿದ್ದಾಗ ಸಾಧನೆಗೈಯಲು ಸಾಧ್ಯ : ಸಿ.ಚಲುವಯ್ಯ

■ ಉದಯರಶ್ಮಿ ದಿನಪತ್ರಿಕೆ



ಎಚ್.ಡಿ.ಕೋಟೆ: ಓದಬೇಕೆಂಬ ಹಸಿವು ಇದ್ದಾಗ ಮಾತ್ರ, ಬಡತನವನ್ನು ಮೆಟ್ಟಿನಿಂತು ಜೀವನದಲ್ಲಿ ಏನಾದರು ಸಾಧನೆ ಮಾಡಲು ಸಾಧ್ಯ. ಶಿಕ್ಷಣದ ಮೂಲಕ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ ಎಂದು ಪದವಿ ಪೂರ್ವ ಶಿಕ್ಷಣ ಉಪ ನಿರ್ದೇಶಕರಾದ ಸಿ. ಚಲುವಯ್ಯ ಹೇಳಿದರು.

ತಾಲೂಕಿನ ಚಕ್ಕೋಡನಹಳ್ಳಿ ಗ್ರಾಮದಲ್ಲಿ ಆಯೋಜನೆ ಮಾಡಿದ ವಯೋ ನಿವೃತ್ತಿ ಸೇವಾ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನಗೆ ವಿದ್ಯೆ ಕೊಟ್ಟವರು, ತುತ್ತು ಅನ್ನಕ್ಕೆ ಕಾರಣರಾದವರು ವೆಂಕಟ ತಿಮ್ಮಪ್ಪ ಮೇಷ್ಟ್ರು, ಭೂಮಿ ಮೇಲೆ ಹುಟ್ಟಿದ ಮೇಲೆ ತಂದೆ, ತಾಯಿ, ಗುರು, ದೇವರು, ಬಂಧು ಬಳಗ, ಸಮಾಜದ ಋಣವನ್ನು ತೀರಿಸಬೇಕು. ಆಗ ಮಾತ್ರ ಸ್ವರ್ಗ ಸಿಗುತ್ತದೆ. ನಾನು ಸ್ನಾತಕೋತ್ತರ ಪದವಿ ವಿದ್ಯಾಭ್ಯಾಸ ಮುಗಿದ ಮೇಲೆ ವ್ಯವಸಾಯ ಕೂಲಿ ಕೆಲಸ ಮಾಡುತ್ತಿದ್ದೆ. ಓದುವುದಕ್ಕೆ ಮೂಲ ಕಾರಣ ಹಸಿವು . ಕಷ್ಟಪಟ್ಟು ಓದುವುದರ ಜೊತೆಗೆ ಬಡತನವನ್ನು ಮೆಟ್ಟಿನಿಂತು ಶಿಕ್ಷಣವನ್ನು ಗಳಿಸಿ ಉದ್ಯೋಗ ಪಡೆದುಕೊಂಡು ನಾನು ಮಾಡಿದ ಸೇವೆ, ನಡೆ–ನುಡಿ ಗಮನಿಸಿದ ಜಿಲ್ಲಾಡಳಿತ ನನಗೆ ಸರ್ವೋತ್ತಮ ಪ್ರಶಸ್ತಿ ನೀಡಿದೆ. ನಾನು ಹಣ, ಪ್ರಶಸ್ತಿಯ ಹಿಂದೆ ಹೋದವನಲ್ಲ ಇರುವಷ್ಟು ದಿನ ಪ್ರಾಮಾಣಿಕವಾಗಿ ಕೆಲಸ ಮಾಡಿ ನಿವೃತ್ತಿಯ ನಂತರ ಸಾಮಾಜಿಕ ಕೆಲಸಗಳನ್ನು ಮಾಡಬೇಕು ಎಂದು ನಿರ್ಧರಿಸಿದ್ದೇನೆ. ವಿದ್ಯಾರ್ಥಿಗಳಿಗೆ ಐಎಎಸ್, ಕೆಎಎಸ್ ಪರೀಕ್ಷೆಗೆ ಬೇಕಾದ ಮಾರ್ಗದರ್ಶನವನ್ನು ನೀಡುವ ಮೂಲಕ ಸಾಮಾಜಿಕ ಸೇವೆಯನ್ನು ಮಾಡುತ್ತೇನೆ ಎಂದು ಸಿ. ಚಲುವಯ್ಯ ಹೇಳಿದರು.

ಕಾರ್ಯಕ್ರಮದಲ್ಲಿ ಶಾಂತ ಚಲುವಯ್ಯ, ನರಸಿಂಹೇಗೌಡ, ಪರಶಿವಮೂರ್ತಿ, ಪ್ರಕಾಶ್, ಪಿ. ನಾಗರಾಜ್, ಯೋಗ ನರಸಿಂಹೇಗೌಡ, ಕೃಷ್ಣೇಗೌಡ, ಯೋಗೇಂದ್ರೇಗೌಡ, ಪ್ರಾಂಶುಪಾಲ ಶಿವಪ್ಪನಾಯಕ, ಬೆಟ್ಟಸ್ವಾಮಿ, ಶಿವರಾಜ್, ಬೂದನೂರು ರವೀಶ್, ಸಂಪತ್ ಕುಮಾರ್, ನಾಗರಾಜ್, ಚೆಲುವರಾಜು, ವೆಂಕಟೇಶ್, ಶಿವಯ್ಯ, ಡಿ. ನಾಗರಾಜು, ರಂಗೇಗೌಡ, ನಾಗೇಗೌಡ, ಗಿರಿ ಪ್ರಸಾದ್, ರಾಜೇಗೌಡ, ಸುಭಾಷ್, ಕಾಳಪ್ಪಾಜಿ, ಶಿವರಾಜು, ವಕೀಲ ಮಹೇಶ್, ಎಡತೊರೆ ಶಿವರಾಜ್, ಅಂಕಯ್ಯ, ಸ್ವಾಮಿಗೌಡ, ಶಿವಣ್ಣ, ಯೋಗೇಶ್, ಲೋಕೇಶ್, ನಾಗೇಶ್, ಸ್ವಾಮಿ, ಮಂಜು, ಮಹೇಶ್, ನಿಂಗರಾಜಯ್ಯ, ಮಾದಯ್ಯ, ಗೋವಿಂದರಾಜ್, ಬ್ಯಾಂಕ್ ಆನಂದ್, ಶಿವರಾಜ್, ಶಿವಾಜಿ, ಶಿವರಾಜು, ಶೇಖರ್, ಶಾಂತಿ, ಸೋಮಶೇಖರ್, ರವಿಕುಮಾರ್, ರಘು, ಜಯಪ್ಪ, ಕೃಷ್ಣ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ಯಶವಂತರಾಯಗೌಡರಿಗೆ ಮಂತ್ರಿ ಸ್ಥಾನ ನೀಡಲು ವಕೀಲರ ಸಂಘ ಆಗ್ರಹ




■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಶಾಸಕ ಯಶವಂತರಾಯಗೌಡ ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು. ಅನುಭವ, ಹಿರಿತನ, ಪಕ್ಷ ನಿಷ್ಠೆ ಹಾಗೂ ಜನಪರ ಕಾರ್ಯ ಮಾಡಿದ ಶಾಸಕರು. ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ವಕೀಲರ ಸಂಘದ ಅಧ್ಯಕ್ಷ ಸಿದ್ದಣ್ಣ ಬೂದಿಹಾಳ ಆಗ್ರಹಿಸಿದರು.

ನ್ಯಾಯಾಲಯದ ಆವರಣದ ವಕೀಲರ ಸಭಾಭವನದಲ್ಲಿ ಮಾತನಾಡಿದ ಅವರು, ಜೂನ್ 16 ರಂದು ಇಂಡಿಯಲ್ಲಿ ವಕೀಲರ ಸಂಘದಿಂದ ಬೃಹತ್ ಪ್ರತಿಭಟನೆ ನಡೆಸಲಾಗುವದು ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮತ್ತು ವಕೀಲರ ಸಂಘದ ಕಾರ್ಯದರ್ಶಿ ಅಜೀತ ಧನಶೆಟ್ಟಿ ಮಾತನಾಡಿ, ಮೂರು ಬಾರಿ ಜಿಪಂ ಸದಸ್ಯರಾಗಿ, ಜಿಪಂ ಅಧ್ಯಕ್ಷರಾಗಿ ಹಾಗೂ ಮೂರು ಬಾರಿ ಶಾಸಕರಾಗಿ ಕಾರ್ಯನಿರ್ವಹಿಸಿ ಅಪಾರ ಆಡಳಿತ ಅನುಭವ ಮತ್ತು ಜನಸೇವೆಯ ಪರಿಪಕ್ವತೆಯನ್ನು ಗಳಿಸಿದ್ದಾರೆ. ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ನಾಯಕತ್ವ, ಪಕ್ಷ ಸಂಘಟನೆಗೆ ನೀಡಿದ ಕೊಡುಗೆ ಹಾಗೂ ಗಡಿನಾಡಿನ ಅಭಿವೃದ್ಧಿಯ ಕುರಿತು ಅವರ ಬದ್ಧತೆ ಸದಾ ಶ್ಲಾಘನೀಯವಾಗಿದ್ದು ಅವರಿಗೆ ಸಚಿವ ಸ್ಥಾನ ನೀಡಿದರೆ ಇಂಡಿ ಮತಕ್ಷೇತ್ರ ಮತ್ತು ಜಿಲ್ಲೆ ಅಭಿವೃದ್ಧಿ ಹೊಂದಲಿದೆ ಎಂದರು.

ನ್ಯಾಯವಾದಿ ಅಶೋಕ ಗಜಾಕೋಶ ಮಾತನಾಡಿ, ಒಂದು ವೇಳೆ ಸಚಿವ ಸ್ಥಾನ ನೀಡದಿದ್ದರೆ ಜೂನ 16 ರಂದು ಪ್ರತಿಭಟನೆ ನಂತರ ಇಂಡಿ ಬಂದ್ ಗೆ ಕರೆ ನೀಡಲಾಗುತ್ತದೆ ಮತ್ತು ದೆಹಲಿ ವರಿಷ್ಠರ ಗಮನಕ್ಕೆ ತರಲಾಗುವದು ಎಂದರು.

**ಸಚಿವ ಸ್ಥಾನ ನೀಡದಿದ್ದರೆ ಜೂ.16 ರಂದು ಇಂಡಿಯಲ್ಲಿ ವಕೀಲರ ಸಂಘದಿಂದ ಬ್ರಹತ್ ಪ್ರತಿಭಟನೆಗೆ ನಿರ್ಧಾರ**

# ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಚ್ಚುಕಟ್ಟಾಗಲಿ

■ ಉದಯರಶ್ಮಿ ದಿನಪತ್ರಿಕೆ



**ವಿಜಯಪುರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಅಧಿಕಾರಿಗಳಿಗೆ ಸೂಚನೆ**

ವಿಜಯಪುರ: ಎಲ್ಲ ಇಲಾಖೆಗಳು ಸಮನ್ವಯತೆಯೊಂದಿಗೆ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನವನ್ನು ಜೂನ್ 12ರಂದು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಯಶಸ್ವಿಗೊಳಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಹೇಳಿದರು.

ಇತ್ತೀಚೆಗೆ ನಡೆದ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ವಿಶ್ವ ಬಾಲಕಾರ್ಮಿಕರ ಪದ್ಧತಿ ವಿರೋಧಿ ದಿನದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಎಡಿಸಿ ಡಾ.ಔದ್ರಾಮ ಅವರು ಮಾತನಾಡಿದರು. ನಿರ್ದೇಶಾನುಸಾರ ಕಾರ್ಯಕ್ರಮ ಯಶಸ್ವಿಯಾಗಿ ಆಯೋಜಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮ ಪಂಚಾಯಿತಿ, ಪುರಸಭೆ ಹಾಗೂ ನಗರ ಸಭೆ ವತಿಯಿಂದ ಕಸ ವಿಲೇವಾರಿ ವಾಹನಗಳಲ್ಲಿ ಉಚಿತವಾಗಿ ಬಾಲಕಾರ್ಮಿಕ ಪದ್ಧತಿ ವಿರೋಧಿ ಕುರಿತು ಘೋಷಣೆ ಹಾಗೂ ಪಂಚಾಯಿತಿಗಳಲ್ಲಿ ಡಂಗುರ ಸಾರಿಸಬೇಕು ಎಂದು ಸೂಚಿಸಿದರು. ಬಾಲ ಕಾರ್ಮಿಕ ವಿರೋಧಿ ದಿನಾಚರಣೆ ಅಂಗವಾಗಿ ನಡೆಯಲಿರುವ ಜಾಥಾ ಕಾರ್ಯಕ್ರಮಕ್ಕೆ ಶಿಕ್ಷಣ ಇಲಾಖೆ ಉಪನಿರ್ದೇಶಕರಿಗೆ ಸೂಚಿಸಿದ ಅವರು, ಬಾಲಕಾರ್ಮಿಕ ಮುಕ್ತ ಗ್ರಾಮಕ್ಕೆ ಬಹುಮಾನ ನೀಡಬೇಕು ಎಂದು ತಿಳಿಸಿದರು.

ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿಗಳನ್ನು ದಿನದಂದು ಪ್ರಮಾಣ ವಚನ ಸ್ವೀಕರಿಸುವಂತೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು, ಕಾರ್ಮಿಕ ನಿರೀಕ್ಷಕರುಗಳು, ಯೋಜನಾ ನಿರ್ದೇಶಕರು ಹಾಗೂ ಕಾರ್ಮಿಕ ಇಲಾಖೆಯ ಸಿಬ್ಬಂದಿ ಪಾಲ್ಗೊಂಡಿದ್ದರು.